ಇನ್ನು ಹಣಕಾಸಿನ ವಿಚಾರದಲ್ಲಿ ಒಂದೆರಡು ಮಾತು. ಇದುವರೆಗೆ ಶೇಕಡ ಮೂರು, ನಾಲ್ಕರಂತೆ ಕೇಳಿದವರಿಗೆಲ್ಲಾ ಸಾಲ ಕೊಟ್ಟಿರಿ. ಈಗ ನೀವು ಸಾಲವನ್ನು ಎತ್ತಿ ನೋಡೋಣ. ಶೇಕಡ ಆರು ಏಳರಂತೆ ಬಡ್ಡಿ ಕೊಟ್ಟರೂ ಸಾಲ ದೊರೆಯುವುದು ಕಷ್ಟವಾಗಿದೆ. ಹಿಂದೆ ಇಂಡಿಯಾ ಸರ್ಕಾರದವರು 150 ಕೋಟಿ ರೂಪಾಯಿ ಸಾಲ ಬೇಕೆಂದು ಕೇಳಿದಾಗ 50 ಕೋಟಿ ರೂಪಾಯಿಗಳಿಗೆ ಮಿತಿ ಇಡಬೇಕಾಯಿತು. ನಮ್ಮಲ್ಲರುವ ಹಣವೆಲ್ಲಾ ಹೊರಗೆ ಹೋದಮೇಲೆ ಏನು ಮಾಡುವುದ? ಇದನ್ನೆಲ್ಲಾ ಸರ್ಕಾರದವರು ಆಲೋಚನೆಮಾಡಬೇಕು.

ಇನ್ನೊಂದು ವಿಚಾರ. ನಮ್ಮ ಸ್ನೇಹಿತರಾದ ಶ್ರೀ ಮರಿಯಪ್ಪನವರು ಯಾವಾಗಲೂ ಯೋಜನೆಗಳನ್ನು ಹಾಕುವುದರಲ್ಲಿ ಬಹಳ ಉತ್ಸಾಹಶಾಲಿಗಳು. ನಾನೂ ಹಳ್ಳಿಯವನೇ ಆದ್ದರಿಂದ ಗ್ರಾಮಾಭಿವೃದ್ಧಿ ವಿಚಾರದಲ್ಲಿ ನನಗೂ ಉತ್ಸಾಹವಿದೆ. ಈಗ ಇದರ ಸಂಬಂಧವಾಗಿ ಹಿಂದಿನ ಕಥೆಯನ್ನು ಪ್ರಸ್ತಾಪಿಸುವುದು ಬೇಡ. ಏಕೆಂದರೆ ಅದು ಕೆಲವರಿಗೆ ನರಿಹೋಗಬಹುದು ಮತ್ತೆ ಕೆಲವರಿಗೆ ಸರಿಹೋಗುವುದಿಲ್ಲ. ಹಿಂದೆ ಗ್ರಾಮ ಸುಧಾರಕರೆಂದು ನೇಮಕಮಾಡಿದ್ದೆವು. ಈ ಗ್ರಾಮಾಭಿವೃದ್ಧಿ ಯೋಜನೆ 1942-43ರಲ್ಲಿ ಪ್ರಾರಂಭವಾಯಿತು. ಅದಾದಮೇಲೆ ಮದರಾಸಿನಲ್ಲಿ ಶ್ರೀ ಪ್ರಕಾಶಂರವರು ಫಿರ್ಕಾಸ್ಕೀಂ ಎಂದು ಮಾಡಿದರು. ನಾನು ಮೊದಲು ಇಲ್ಲಿ ಮಾಡಿದುದನ್ನು ಅವರು ನೋಡಿ ಸ್ವಲ್ಪ ಸ್ವಲ್ಪವಾಗಿ ಮುಂದುವರಿಸುತ್ತಿದ್ದಾರೆ. ಆದರೆ ಇಲ್ಲಿ ನಮ್ಮ ಸ್ನೇಹಿತರಾದ ಶ್ರೀ ಮರಿಯಪ್ಪನವರು ರೆವೆನ್ಯೂ ಇನ್‌ಸ್ಪೆಕ್ಟರುಗಳಮೇಲೆ ಹೆಚ್ಚು ನಂಬಿಕೆ ಇಟ್ಟರು. We should not change horses in the middle-stream ಎಂದು ನಾನು ಹೇಳಿದೆ. ಆದರೆ ಅವರು ಕೇಳಲಿಲ್ಲ.

Sri M. GOVINDA REDDY.—Grama-sudharaks are very bad horses.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—'ಗ್ರಾಮ ಸುಧಾರಕ' ಎಂಬ ಸಂಸ್ಕೃತ ಶಬ್ದ ಚೆನ್ನಾಗಿತ್ತು. ಅದನ್ನು ಬದಲಾಯಿಸಿ ಡೆವಲಪ್‌ಮೆಂಟ್ ಇನ್‌ಸ್ಪೆಕ್ಟರ್ ಎಂದು ನೇಮಕಮಾಡಿದರು. ಅವರಲ್ಲಿ ಅನೇಕರು ಹಿಂದೆ ಗ್ರಾಮ ಸುಧಾರಕರಾಗಿದ್ದವರೇ ಇದ್ದಾರೆ. Central Planning ಕಮಿಟಿಯವರು ಕೆಲವರಿಗೆ ಶಿಕ್ಷಣ - ಕೊಟ್ಟು ಈ ಕೆಲಸಕ್ಕೆ ನೇಮಿಸಬೇಕೆಂದು ನಿರ್ಧರಿಸಿದ್ದಾರೆ. ಅದನ್ನು ನೋಡಿ ಇಲ್ಲಿಯೂ ಈ ಇನ್‌ಸ್ಪೆಕ್ಟರುಗಳನ್ನು ಮಾಡಿದರು. ಒಟ್ಟಿನಲ್ಲಿ ಒಂದು ನೀತಿಯನ್ನು ಹೇಳುವುದಾದರೆ, ಈಗ ನೀವು ಒಂದು ಯೋಜನೆಯನ್ನು ಪ್ರಾರಂಭಮಾಡಿದರೆ ಅದನ್ನು ಮುಂದಿನ ಸರ್ಕಾರ ಬದಲಾಯಿಸಬಾರದು, ಇದನ್ನೇ ಮುಂದುವರಿಸಬೇಕು. ಆದರೆ ಈಗ ಏನಾಗಿದೆಯೆಂದರೆ, ಒಂದು ಬೀಜವನ್ನು ನೆಡುವುದು, ಅದು ಮೊಳಕೆಯಾಗುವುದರೊಳಗೇ ಅದನ್ನು ಕೆರೆದು ನೋಡುವುದು, ಹೀಗಾಗಿದೆ. ಹೀಗೆ ಮಾಡುತ್ತಿರುವ ನಿಮ್ಮ ಮಾರ್ಗ ನನಗೆ ಒಪ್ಪಿಗೆ ಇಲ್ಲ. ಇತರರಿಗೆ ಒಪ್ಪಿಗೆಯಾಗಿರಬಹುದು. ಗ್ರಾಮ ಸುಧಾರಕರೆಂಬ ಹೆಸರು ತೆಗೆದು ಡೆವಲಪ್‌ಮೆಂಟ್ ಇನ್‌ಸ್ಪೆಕ್ಟರ್ಸ್ ಎಂದು ಮಾಡಿದಿರಿ. ಏಕೆ ಕನ್ನಡದಲ್ಲಿ ಬೇರೆ ಯಾವುದಾದರೂ ಹೆಸರು ಕೊಡಬಾರದಾಗಿತ್ತು! ಈಗಾಗಲೇ 200 ಇನ್‌ಸ್ಪೆಕ್ಟರುಗಳನ್ನು ನೇಮಕಮಾಡಿರುವುದಾಗಿ ಹೇಳಿದರು. ಈ ವಿಚಾರ ಈಗ ನಾನು ಮಾತನಾಡುವುದಿಲ್ಲ. ಅವರೆಲ್ಲ ನಿಜವಾಗಿ ಸೇವೆ ಮಾಡುವುದಾದರೆ ನಾವೆಲ್ಲರೂ ಸಂತೋಷಪಡೋಣ.

ಇನ್ನು ಚುನಾವಣೆಗಳ ವಿಚಾರ ಮತ್ತು ಡೀಲಿಮಿಟೇಷನ್ ವಿಚಾರ. 1951ರಲ್ಲಿ ಚುನಾವಣೆಗಳು ನಡೆಯುವುದಿಲ್ಲವೆಂದು ನಾನು ಮೊದಲೇ ಹೇಳಿದ್ದೆ. ಇವೊತ್ತಿನ ವೃತ್ತಪತ್ರಿಕೆಗಳಲ್ಲರುವಂತೆ ಕೇಂದ್ರ ಸರ್ಕಾರದವರು 1951ನೆಯ ಅಕ್ಟೋಬರ್‌ನಲ್ಲಿ ನಡೆಯಬಹುದೆಂದು ಹೇಳಿದ್ದಾರೆ. ಅದೂ ನಡೆಯುತ್ತದೆಂಬ ನಂಬಿಕೆ ನನ್ನಿಲ್ಲ. ಒಂದು ಸರ್ಕಾರ ಎಂದಮೇಲೆ ಎಲ್ಲವನ್ನೂ ನೋಡಿ ಕೆಲಸ ಮಾಡಬೇಕು. ಚುನಾವಣೆ ನಡೆಯುವ ಸಂಬಂಧವಾಗಿ ಮೊದಲೇ ನಡೆಸಬೇಕಾದ ಕೆಲಸಕಾರ್ಯಗಳಲ್ಲಿ ಯಾವುದಾದರೂ ಒಂದು ಸಂಸ್ಥಾನ ಹಿಂದುಳಿದರೂ ಚುನಾವಣೆ ನಡೆಯಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರೆ ಚುನಾವಣೆ ನಿಲ್ಲುತ್ತೆಯೇ! ಪ್ರಧಾನಿಗಳೇನೋ ಚುನಾವಣೆಗಳು ಬೇಗ ನಡೆಯಬೇಕೆಂದು ಹೇಳುತ್ತಾರೆ. ಅದು ನಡೆಯಬೇಕಲ್ಲ. ಆದುದರಿಂದ ನಾನು ಹೇಳುವುದಿಷ್ಟೆ. ನೀವು ಚುನಾವಣೆಗಳನು 1952 ಅಥವಾ 1953ರರಲ್ಲಾದರೂ ಇಟ್ಟುಕೊಳ್ಳಿ. ಆದರೆ ಖಂಡಿತವಾಗಿ ಇಂಥ ದಿನವೇ ನಡೆಯುತ್ತೆಂದು ಅದನ್ನು ಜನರಿಗೆ ಹೇಳಿಬಿಡಿ.

ಅಧ್ಯಕ್ಷರು.—ಅದನ್ನು ಇವರು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಬಿ ಗುಂಡಪ್ಪಗೌಡರು.—ಅವರು ಚುನಾವಣೆ ನಡೆಸುವವರು. ಆದರೂ ಇವರೆಲ್ಲರೂ ಸೇರಿ ಅಲ್ಲಿ ಅವರಿಗೆ ಹೇಳಬೇಕು. ಎಲ್ಲ ಪ್ರಾಂತ ಸರ್ಕಾರಗಳೂ ಒಟ್ಟಾಗಿ ಸೇರಿ ಹೇಳಬೇಕು. ಇವರೊಬ್ಬರೇ ಮಾಡಬೇಕೆಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು.—ಡೀಲಿಮಿಟೇಷನ್ ಕಮಿಟಿ ಮಾಡುವವರೂ ಅವರೇ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೌದು. ಪೂರ್ವಬಂಗಾಳದಿಂದ ಎಷ್ಟೋ ನಿರಾಶ್ರಿತರು ಬಂದಿದ್ದಾರೆ. ಅವರಿಗೆಲ್ಲಾ ಸರಿಯಾದ ವ್ಯವಸ್ಥೆ ಮಾಡಿದ ಹೊರತು ನಾವು ಓಟರುಗಳ ಪಟ್ಟಿ ಮಾಡಲು ಸಾಧ್ಯವಿಲ್ಲವೆಂದು ಪಶ್ಚಿಮ ಬಂಗಾಳ ಹೇಳಬಹುದು. ಈಗ ಡೀಲಿಮಿಟೇಷನ್ ಸಮಿತಿಯ ಶಿಫಾರಸು ನಮ್ಮಮುಂದೆ ಬರುತ್ತದೆ. ಅದರಲ್ಲಿ ಏನು ಮಾಡಿದ್ದಾರೋ ನೋಡೋಣ. ಒಟ್ಟಿನಲ್ಲಿ ಹೇಳುವುದಾದರೆ, ಯಾವಾಗ ಚುನಾವಣೆಗಳನ್ನು ನಡೆಸುತ್ತೀರೆಂಬುದನ್ನು ಹೇಳಿಬಿಡಿ. ಹಾಗಿಲ್ಲದೆ ಇದ್ದರೆ ಇದರಿಂದ ಜನಗಳಿಗೆ ಏನು ಅನ್ನಿಸುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹೀಗೆ ಮಾಡುವುದು ನಿಮಗೂ ಚೆನ್ನಾಗಿರುವುದಿಲ್ಲ. ನಮಗೂ ಚೆನ್ನಾಗಿರುವುದಿಲ್ಲ. ಇದರ ಪರಿಣಾಮ ಹಲವಾರು ಇರುವುದರಿಂದ ಇದು ನ್ಯಾಯವಲ್ಲ. ಸರ್ಕಾರದ ಹೇಳಿಕೆ ಎಂದರೆ ನಿರ್ದಿಷ್ಟವಾಗಿರಬೇಕು. ಇಲ್ಲದೆ ಇದ್ದರೆ ಆ ಪವಿತ್ರತೆ (sacredness) ಹೊರಟುಹೋಗುತ್ತದೆ. ಅದನ್ನೆರ್ಲಾ ಆಲೋಚನೆ ಮಾಡಿ ಇದಕ್ಕೆ ನಿಗಾ ಕೊಡಬೇಕು.

ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೆ. ಮೊದಲೇ ಹೇಳಿದ ಹಾಗೆ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ನೋಡಿದರೆ ದೇವರೂ ಕೂಡ ವಿರೋಧವಾಗಿ ಇರುವ ಹಾಗೆ ಕಾಣುತ್ತದೆ. ಅದನ್ನೆಲ್ಲಾ ಗಮನಿಸಿ ಈ ಕಷ್ಟಪರಿಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ಯಾವ ಯಾವ ಕೆಲಸಗಳನ್ನು ಮಾಡಬಹುದೆಂಬುದನ್ನು ನೋಡಬೇಕು. ಟೀಕೆಗಳು ಬಂದರೆ ಅದಕ್ಕೆ ಯಾರೂ ಏನೂ ವಿಷಾದ ಪಡಬೇಕಾಗಿಲ್ಲ. ಟೀಕೆಗಳು ಬರಲಿ. ಅಂಥ ಟೀಕೆಗಳನ್ನು ಮಾಡಿದವರಿಗೆ ಹೆಚ್ಚು ಗೌರವ ಕೊಡಬೇಕು. ವಿರೋಧ ಪಕ್ಷದವರು ರಚನಾತ್ಮಕ ಟೀಕೆಗಳನ್ನೇ ಮಾಡಬೇಕೆಂದು ಪ್ರಜಾಪ್ರಭುತ್ವದಲ್ಲಿ ಎಲ್ಲೂ ಇಲ್ಲ. ರಚನಾತ್ಮಕ ಟೀಕೆಗಳನ್ನು ಕೊಡಿ, ರಚನಾತ್ಮಕ ಟೀಕೆಗಳನ್ನು ಕೊಡಿ ಎಂದು ವಿರೋಧ ಪಕ್ಷದವರನ್ನು ಕೇಳುವುದು ಅದು ತಮ್ಮಲ್ಲಿರತಕ್ಕ bankruptcy ಎಂದು ಹೇಳುತ್ತೇನೆ. ಟೀಕೆಗಳನ್ನು ಮಾಡಿದರೆ ಉತ್ತೇಜನ ಕೊಡಿ. ಇಲ್ಲದೇ ಇದ್ದರೆ ಸುಮ್ಮನೆ ಇರಿ. ಈಗಿನ ಪರಿಸ್ಥಿತಿಯಲ್ಲಿ ದೇಶ ಬಹಳ ಕಷ್ಟದಲ್ಲಿದೆ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ ರಾಜ್ಯ ಉಳಿಸಿಕೊಳ್ಳಬೇಕಾಗಿದೆ. ಭಿನ್ನಾಭಿಪ್ರಾಯಗಳು ಅನೇಕವಾಗಿವೆ. ಅವುಗಳನ್ನೆರ್ಲಾ ಹೇಳುತ್ತ ಹೋದರೆ ನಮಗೂ ಕೋಪ ಬರುತ್ತದೆ, ನಿಮಗೂ ಕೋಪ ಬರುತ್ತದೆ.

ಶ್ರೀ ಎಚ್. ಸಿ. ದಾಸಪ್ಪನವರು.—ನಮಗೆ ಬರುವುದಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕೆಲವರಿಗೆ ಬರುತ್ತದೆ, ಕೆಲವರಿಗೆ ಬರುವುದಿಲ್ಲ. ತಮ್ಮಂಥವರು ಬಹಳ ಸ್ವಲ್ಪ. ಒಟ್ಟಿನಲ್ಲಿ ಒಗ್ಗಟ್ಟಿನಲ್ಲಿ ಕೆಲಸ ಮಾಡಿ. ಹಣಕಾಸಿನ ಸಚಿವರಿಗೆ ನಾನು ಹೇಳುವುದೇನೆಂದರೆ, ಹಣಕಾಸಿನ ವಿಚಾರದಲ್ಲಿ ಇವತ್ತು ಅವರ ಜವಾಬ್ದಾರಿ ಪೂರ್ಣವಾಗಿದೆ. ಈಗ ಹಣ ಕಾಸು ಬರಿದಾಗುತ್ತಾ ಇದೆ. ಆ ಭಾರವಲ್ಲಾ ಅವರ ಮೇಲಿದೆ. ನಾಳೆ ನೀವೂ, ನಾವೂ ಎಲ್ಲರುತ್ತೇವೆಯೋ ನಮಗೆ ಗೊತ್ತಾಗುವುದಿಲ್ಲ. ಆ ವಿಚಾರದಲ್ಲಿ ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡಿ ದೇಶಕ್ಕೆ ಕಲ್ಯಾಣವಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಶ್ರೀಮದ್ಮಹಾರಾಜರವರು ನೆನ್ನೆಯ ದಿನ ಮಾಡಿದ ಭಾಷಣಕ್ಕಾಗಿ ವಂದನಾರ್ಪಣೆ ಸೂಚಿಸತಕ್ಕ ನಿರ್ಣಯವನ್ನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಶ್ರೀಮದ್ಮಹಾರಾಜರವರು ಪ್ರಚುರಪಡಿಸಿರತಕ್ಕ ಅಂಶಗಳಲ್ಲಿ ನಮಗೆ ಸಂಬಂಧಪಟ್ಟಂತೆ ಬಹುಮುಖ್ಯವಾದ ಎರಡು ಅಂಶಗಳು ಎದ್ದು ಕಾಣುತ್ತವೆ. ಮತ್ತು ಆ ವಿಚಾರಗಳ ಮೇಲೆ ಬಹಳ ಹೆಚ್ಚಿನ ಚರ್ಚೆಯೂ ಕೂಡ ಈ ಸಭೆಯಲ್ಲಿ ಆಗುತ್ತಾ ಇದೆ. ಇದುವರೆಗೂ ಭಾಷಣಮಾಡಿದಂಥವರು ಕೇವಲ ವಾಗ್‌ವಿವಾದ ಮಾಡಿ ಘರ್ಷಣೆ ಮಾಡತಕ್ಕ ರೀತಿಯಲ್ಲಿ ಕೆಲವು ಮಾತುಗಳನ್ನು ಆಡಿದರೇ ವಿನಾ ವಾಸ್ತವಾಂಶಗಳನ್ನು ಹಿಡಿದು ದೇಶದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯನಿರವೇರತಕ್ಕ ರೀತಿಯಲ್ಲಿ ಮಾತನಾಡಿದ್ದು ಅಷ್ಟಾಗಿ ಎದ್ದು ಕಂಡುಬರಲಿಲ್ಲ. ಅದರಲ್ಲಿ ಶ್ರೀ ಗುಂಡಪ್ಪ ಗೌಡರು ಬಹಳ ಅಮೋಘವಾದ ಸಲಹೆಗಳನ್ನು ಕೊಟ್ಟರು. ಜನಾಬ್ ಮಹಮದ್ ಇಮಾಂರವರು ಅನೇಕ ವಿಷಯಗಳನ್ನು ಪ್ರಸ್ತಾಪಿಸುತ್ತಾ ಅನೇಕ ಟೀಕೆಗಳನ್ನು ಮಾಡಿದರು. ಅವುಗಳ ಜೊತೆಗೆ ಸಮರ್ಪಕವಾದ ರೀತಿಯಲ್ಲಿ ಸಲಹೆಗಳನ್ನೂ ಸಹ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಮುಖ್ಯವಾಗಿ ನನ್ನ ಗಮನಕ್ಕೆ ಸೆಳೆದಿರುವುದು ಎರಡು ವಿಷಯ. ಅದೇನೆಂದರೆ, ಮೊದಲನೆಯದು ವಿಲೀನೀಕರಣದ ವಿಚಾರದಲ್ಲಿ ಸರ್ಕಾರದ ನೀತಿ ಹೇಗೆ ಇರಬೇಕಾಗಿತ್ತು ಎಂಬುದು. ಆ ವಿಚಾರ ಕೊಂಚಮಟ್ಟಿಗೆ ವಿಪುಲವಾಗಿ ಚರ್ಚೆಯಾಗಿದೆ. ಎರಡನೆಯದಾಗಿ ದೇಶದಲ್ಲಿ ಆಹಾರದ ನೀತಿ ಯಾವ ರೀತಿ ಇದೆ ಎಂಬುದು. ಈ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದುವು. ಒಟ್ಟಿನಲ್ಲಿ ನಾವು ವಾಸ್ತವಾಂಶಗಳನ್ನು ಸರಿಯಾದ ದೃಷ್ಟಿಯಲ್ಲಿ ನೋಡುವುದಕ್ಕೆ ಯಾರೂ ಹಿಂತೆಗೆಯಬಾರದು. ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ನಡೆಸತಕ್ಕವರೂ ಕೂಡ ವಾಸ್ತವಾಂಶಗಳನ್ನು ಸರಿಯಾದ ದೃಷ್ಟಿಯಲ್ಲಿ ನೋಡಿ ಅದಕ್ಕೆ ತಕ್ಕ ಪರಿಹಾರವನ್ನು ಯೋಚನೆ ಮಾಡತಕ್ಕವರಾಗಬೇಕೇ ವಿನಾ ವಾಸ್ತವಾಂಶಗಳನ್ನು ಬದಿಗಿಟ್ಟು ಯಾವುದೋ ಒಂದು ಪ್ರತಿಷ್ಠೆಯನ್ನು ಪ್ರತಿಪಾದಿಸುವ ರೀತಿಯಲ್ಲಿ ಹೋಗಬಾರದು ಎಂಬುದು ಪ್ರಜಾಪ್ರಭುತ್ವದ ಸಿದ್ಧಾಂತ. ಅದನ್ನು ನಾನು ಹೇಳಬೇಕಾಗಿಲ್ಲ.

ಈಗ ಇಂಡಿಯಾದೇಶದ ನೌಕರರ ಸಂಸ್ಥೆ ಒಂದು ಇದೆ. ಅದರಲ್ಲಿ ನಮ್ಮ ನೌಕರರನ್ನು ಸೇರಿಸಬೇಕೆಂಬ ವಿಚಾರ ಬಹಳ ಪ್ರಾಮುಖ್ಯವಾದದ್ದು. ಆ ಸಂಬಂಧವಾಗಿ ಈ ಸಭೆಯವರನ್ನು ಕೇಳಿ ಮಾಡುವುದಕ್ಕೆ ಏನು ಅಡ್ಡಿ ಆತಂಕವಿತ್ತು ಎಂಬುದಾಗಿ ಕೆಲವರು ಕೇಳಿದರು. ನಾನೂ ಕೇಳಿದೆ. ಬಹಳ ಮಹತ್ವದ ವಿಷಯವಾದ ಪಕ್ಷದಲ್ಲಿ ವಿಚಾರಮಾಡಿ (consult) ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಪ್ರಜಾಪ್ರಭುತ್ವದಲ್ಲಿ ಅನೇಕ ದೃಷ್ಟಾಂತಗಳಿವೆ. ಇಂಥಾ ಮಹತ್ತರವಾದ ವಿಚಾರಗಳಲ್ಲಿ ಸರ್ಕಾರದವರು ಮೊದಲೇ ಕಾರ್ಯಕ್ರಮ ತೆಗೆದುಕೊಂಡು ಆಮೇಲೆ ಸಭೆಯ ಮುಂದಿಡುವ ಒಂದು ನೀತಿಯೂ ಕೂಡ ಇದೆ. ಅದು ಎಂಥಾ ಕಾಲ ಎಂಬುದನ್ನು ಯೋಚನೆ ಮಾಡಬೇಕು. ಕೊರಿಯಾ ಯುದ್ಧ ಪ್ರಾರಂಭವಾದಾಗ ಅಂದು ತೀರ್ಮಾನ ತೆಗೆದು ಕೊಳ್ಳುವುದು ಜರೂರಾಗಿತ್ತು. ಆ ರೀತಿ ತೀರ್ಮಾನ ತೆಗೆದುಕೊಂಡು ಸೆಕ್ಯೂರಿಟಿ ಕೌನ್ಸಿಲ್ ಮುಂದೆ ಇಟ್ಟರು. ಆ ರೀತಿ ಮಾಡುವುದು ಸ್ವಾಭಾವಿಕ. ವಿಲೀನೀಕರಣದ ವಿಚಾರ ಬಹಳ ವಿವೇಚನೆಯಿಂದ ಯೋಚನೆ ಮಾಡಬೇಕಾಗುತ್ತದೆ ಎಂಬ ವಿಷಯ ಪ್ರಪಂಚಕ್ಕೇ ಗೊತ್ತಿದೆ. ಆ ವಿಷಯದಲ್ಲಿ ಬೇಕಾದಷ್ಟು ಕೆಟ್ಟ ಪರಿಣಾಮವಾಗುತ್ತದೆ. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಹೊರಗೆ ಬಿಡದೆ ಒಂದು ನೀತಿಯನ್ನು ಪ್ರತಿಪಾದಿಸಿ ಆ ಮೇರೆ ದೇಶದ ಒಂದು ಅಭಿಮತ ಪಡೆಯಬೇಕು. ನಾನೊಂದು ಪ್ರಶ್ನೆ ಕೇಳುತ್ತೇನೆ. ಇಂಟಗ್ರೇಷ್ ಆಫ್ ಸರ್ವಿಸಸ್‌ನಲ್ಲಿ ಏನು ಅಂಥಾ ಮಹಾ ಪ್ರಮಾದ ಇತ್ತು? ಇವತ್ತು ಆಗುವುದು ನಾಳೆ ಆಗುತ್ತಿತ್ತು. ನಾಳೆ ಇಲ್ಲದಿದ್ದರೆ ಇನ್ನೂ ಒಂದು ವರ್ಷ ಆಗುತ್ತಿತ್ತು. ಅಂಥ ಒಂದು ದೊಡ್ಡ ತೊಂದರೆ ಏನೂ ಇರಲಿಲ್ಲ. ಈಗ ಈ ಸರ್ವೀಸ್‌ನಲ್ಲಿ ಅತೃಪ್ತಿ, ಅನಮಾಧಾನ ಉಂಟಾದರೆ ಆದು ಬರೀ ಸರ್ವೀಸ್‌ನಲ್ಲಿರತಕ್ಕವರಿಗೆ ಮಾತ್ರ ಪರಿಣಾಮವಾಗುವುದಿಲ್ಲ. ಅದನ್ನು ಯೋಚನೆ ಮಾಡಬೇಕು. ದೇಶದ ಆಡಳಿತದಲ್ಲಿ ಅಶಾಂತಿ ತಲೆದೋರಿದರೆ ಅದರ ಕಾರ್ಯದಕ್ಷತೆಯನ್ನು ನಡೆಸತಕ್ಕ ನೌಕರರಲ್ಲಿ ದಕ್ಷತೆ ಕಡಿಮೆಯಾದರೆ ದೇಶದ ಮೇರೆ ಎಂತಹ ಪರಿಣಾಮವುಂಟಾಗುತ್ತದೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಎರಡನೆಯದಾಗಿ, ಸರ್ಕಾರಿ ನೌಕರರಲ್ಲಿ ನೌಕರಿ ಭದ್ರತೆಯ ಭರವಸೆ, ಶಾಂತಿ, ಸಮಾಧಾನ ಇದ್ದರೆ ಸರ್ಕಾರದ ರೀತಿನೀತಿಗಳು ಸರಿಯಾಗಿ ನಡೆದುಕೊಂಡು ಹೋಗುತ್ತವೆ. ಈ ಸಂದರ್ಭದಲ್ಲಿ ನಾನು ಸರ್ಕಾರದವರಿಗೆ ಸಲಹೆ ಕೊಡುವುದು ಇಷ್ಟೆ: ರಾಜಕೀಯದಲ್ಲಿ ಯಾವುದೂ ಆಖೈರು ಇಲ್ಲ. ಅನೇಕ ವೇಳೆ ಪರಿಸ್ಥಿತಿಗೆ ತಕ್ಕಂತೆ ನಾವು ವಿಷಯಗಳನ್ನು ಬದಲಾವಣೆಮಾಡುವುದು ಸ್ವಾಭಾವಿಕ. ಎಷ್ಟೋ ನಾವೂ ಮಾಡಿದ್ದೇವೆ. ತಾವೂ ಮಾಡಿದ್ದೀರಿ. ಕೇಂದ್ರಸರ್ಕಾರದವರೂ ಮಾಡಿದ್ದಾರೆ. ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದನ್ನು ಜಾರಿಗೆ ಕೊಟ್ಟು ಅಡ್ಡಿ ಆತಂಕಗಳು ಬಂದಾಗ ಬದಲಾವಣೆ ಮಾಡುತ್ತಾರೆ. ಆ ರೀತಿ ಮಾಡಿರುವ ಅನೇಕ ದೃಷ್ಟಾಂತಗಳಿವೆ. ಇದುವರೆಗೆ ಮಾತನಾಡಿದವರಲ್ಲಿ ಕೆಲವರು ಯಾವ ರೀತಿಯಲ್ಲೇ ಆಗಲಿ ಇಂಡಿಯಾ ಸರ್ಕಾರದ ಸರ್ವೀಸಸ್‌ನಲ್ಲಿ ನಮ್ಮ ಸರ್ವೀಸಸ್ ವಿಲೀನೀಕರಣ ಮಾಡುವುದು ದೇಶದ ಹಿತದೃಷ್ಟಿಯಿಂದ ಸಾಧುವಾದದ್ದಲ್ಲವೆಂದು ಹೇಳಿದರು. ಮತ್ತೆ ಇದು ಆಗಬಹುದು. ದೇಶದ ಭದ್ರತೆಗೆ ಇದು ಮುಖ್ಯವಾದದ್ದು ಎಂದು. ಮತ್ತೆ ಕೆಲವರು ಸೂಚಿಸಿದರು. ಈ ಸಂದರ್ಭದಲ್ಲಿ ನಾನು ನನ್ನ ಅಭಿಪ್ರಾಯವನ್ನು ಸೂಚಿಸುವುದಾದರೆ ವಿಶೇಷ ಕೇಂದ್ರೀಕರಣದಿಂದ ದೇಶದ ಭದ್ರತೆಗೆ ಧಕ್ಕೆ ಬರುತ್ತದೆಯೋ ಏನೋ ಎಂದು ಇವತ್ತು ನನ್ನ ಮನಸ್ಸಿನಲ್ಲಿ ಅನ್ನಿಸುತ್ತದೆ. ದಿನೇ ದಿನೇ ದಕ್ಷತೆಯನ್ನು ಹೆಚ್ಚಿಸಬೇಕೆಂದು ಹೇಳಿ ಅಧಿಕಾರಿಗಳನ್ನೆಲ್ಲಾ ಕೇಂದ್ರೀಕರಿಸತಕ್ಕ ಒಂದು ರೀತಿ ನೀತಿಯನ್ನನುಸರಿಸಿ ಅವರೆಲ್ಲಾ ಒಂದು ಕಡೆಗೆ ಹೋದರೆ ದೇಶದ ಆಡಳಿತ ಎಷ್ಟುಮಟ್ಟಿಗೆ ನಡೆಯುತ್ತದೆ ಎಂಬುದಕ್ಕೆ ಒಂದೆರಡು ಅಂಶಗಳು ಅನುಭವಕ್ಕೆ

ಬಂದಿವೆ. ಈಗಾಗಲೇ ದೆಹಲಯಲ್ಲಿ ನಡೆಯತಕ್ಕ ಆಡಳಿತವು ಎಷ್ಟು ಶಿಸ್ತಿನಿಂದ, ದಕ್ಷತೆಯಿಂದ ಕೆಲಸ ನಡೆಯುತ್ತಾ ಇದೆ ಎಂಬುದಕ್ಕೆ ಉದಾಹರಣೆಗಳನ್ನು ಹೇಳಿದರೆ ಬಹುಶಃ ಮನಸ್ಸಿಗೆ ನೋಯಬಹುದು.

ಬಹುಶಃ ಇದಕ್ಕೆ ಉತ್ತರವಾಗಿ 'ನಿಮಗೆ ಸಂಬಂಧವಿಲ್ಲ' ಎಂದು ಹೇಳಬಹುದು. ಆದರೂ ತಾವೂ ಒಂದಂಶವನ್ನು ಗಮನಿಸಬೇಕು. ದೇಶದಲ್ಲಿ ಶಾಂತಿ ಸಮಾಧಾನಗಳನ್ನು ಕಾಪಾಡುವ ಡಿಸ್ಟ್ರಿಕ್ಟ್ ಆಫೀಸರುಗಳು ಕೈಗಿದ್ದರೆ ಏನಾಗುತ್ತದೆಂಬುದನ್ನು ಯೋಚನೆ ಮಾಡಿ. ಪಂಜಾಬಿನಿಂದ ಒಬ್ಬ ಪಂಜಾಬಿಯೋ, ಇಲ್ಲವೇ ಬಂಗಾಳದಿಂದ ಒಬ್ಬ ಬಂಗಾಳಿಯೋ ಬಂದು 'ನಿಮ್ಮಲ್ಲಿ ಎಷ್ಟು ಬತ್ತ ಬೆಳೆಯುತ್ತದೆಂದು' ಕೇಳತಕ್ಕ ಪರಿಸ್ಥಿತಿ ಬರುತ್ತದೆ ಅಷ್ಟೆ! ಒಟ್ಟಿನಲ್ಲಿ ಹೇಳುವುದಾದರೆ, ಮಾನ್ಯ ಸದಸ್ಯರು ಕೆಲವರು ಸೂಚಿಸಿದಂತೆ ಅಧಿಕಾರಿಗಳಿಗೆ ಸ್ಥಳಾಭಿಮಾನ, ದೇಶವಾತ್ಸಲ್ಯ ಇತ್ಯಾದಿ ಇತ್ಯಾದಿ ಗುಣಗಳಿರಬೇಕಾದ್ದು ಅವಶ್ಯಕ. ಅಲ್ಲದೆ ಇನ್ನೂ ಒಂದು. ನೀವೇನು ಜರೂರು ಕಾರ್ಯಕ್ರಮ ತೆಗೆದುಕೊಂಡರೂ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಾದರೆ ತೆಗೆದುಕೊಳ್ಳಿ. ರೆಜಿಸ್ಲೇಟಿವ್ ಅಸೆಂಬ್ಲಿಯೆನ್ನುವುದು ಸರ್ಕಾರಕ್ಕೆ ಬೆಂಬಲಕೊಡತಕ್ಕ ಒಂದು ಸಭೆ. ದೇಶದ ಅಭಿಪ್ರಾಯವನ್ನು ಪ್ರತಿಬಿಂಬಿಸತಕ್ಕುದು ಅದು. ನೀವು ಮಾಡತಕ್ಕ ಕೆಲಸದಲ್ಲಿ ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರೆ ಸರ್ಕಾರಕ್ಕೆ ಪಾತ್ರವಾದ ಬೆಂಬಲವಿರುತ್ತದೆ; ಪ್ರತಿಭೆಯಿರುತ್ತದೆ. ಹಿಂದುಪೇಳೆ ಎಡರು ತೊಡರುಗಳೇನಾದರೂ ಬಂದರೆ ಅವಶ್ಯಕ ಕಂಡರೆ ನಮ್ಮ ಅಭಿಪ್ರಾಯಗಳನ್ನು ಮಾರ್ಪಾಡುಮಾಡಿಕೊಂಡು ದೇಶದ ಕೆಲಸಕಾರ್ಯಗಳನ್ನು ಮಾಡುವುದು ಕಷ್ಟವಲ್ಲ. ಏನಾದರೂ ಅತಿ ಜರೂರಾದ ವಿಷಯವಾಗಿದ್ದು ತಾವು ತೀರ್ಮಾನ ತೆಗೆದುಕೊಂಡಿದ್ದರೆ ಪರವಾಗಿಲ್ಲ. ಈ ವಿಷಯದರ್ಲಾದರೋ ಅಂಥಾದ್ದೇನೂ ಇಲ್ಲ. ಅಲ್ಲದೆ, ಈಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಈ ತೀರ್ಮಾನವನ್ನು ಬದರಾಯಿಸಬಹುದೆಂದು ಕಾಣುತ್ತದೆ. Nothing is final in politics. 'ನಮ್ಮ ಜನರ ಅಭಿಪ್ರಾಯ ಈ ರೀತಿಯಾಗಿದೆ, ನಮ್ಮ ಅಧಿಕಾರಿವರ್ಗದವರ ಅಭಿಪ್ರಾಯವಿದು, ಎಂದು ಮುಂತಾಗಿ ಎರ್ಲಾ ಅಂಶಗಳನ್ನೂ ಕೇಂದ್ರ ಸರ್ಕಾರಕ್ಕೆ ತಿಳಿಸಬಹುದು.

ಎರಡನೆಯದಾಗಿ, ಭಾರತ ರಾಜ್ಯಾಂಗದ 312ನೆಯ ಸೆಕ್ಷನ್ನಿನ ದೃಷ್ಟಿಯಿಂದಲೂ ಇದನ್ನು ಪರಿಶೀಲಿಸಬೇಕು. ಅಲ್ಲಿ ಇದನ್ನು ಖಚಿತವಾಗಿ ವಿಶದಪಡಿಸಿದೆ. ಇಂಥ ಐಕ್ಯತೆಯಾಗಬೇಕಾದರೆ ಇಂಡಿಯಾದ ಕೌನ್ಸಿರ್ ಆಫ್ ಸ್ಟೇಟ್‌ನಲ್ಲಿ 2/3ರಷ್ಟು ಬಹುಮತದಿಂದ ಒಪ್ಪಿಗೆಯಾದ ಒಂದು ನಿರ್ಣಯ ಆಗಿ, ಅದರ ಮೇಲೆ ಕೇಂದ್ರಸರ್ಕಾರದವರು ಒಂದು ಮಸೂದೆಯನ್ನು ತಂದು ಮುಂಜೂರಾದ ಮೇಲೆ ಇದನ್ನು ಮಾಡಬೇಕೆಂದಿದೆ. ಒಂದು ವೇಳೆ ಯಾವುದಾದರೂ ತೀರ್ಮಾನವನ್ನು ಈ ರಾಜ್ಯಾಂಗ ಬರುವುದಕ್ಕೆ ಮುಂಚಿತವಾಗಿಯೇ ಮಾಡಿದ್ದೆವೆನ್ನುವುದಾದರೆ, ಈಗ ಈ ರಾಜ್ಯಾಂಗ ಬಂದಮೇಲೆ ಇನ್ನೂ ನಮ್ಮ ವಾದಕ್ಕೆ ಬಂಬಲವೇ ದೊರೆಯಿತು. ಈಗ ಮಾಡಿರುವುದು ನ್ಯಾಯವಲ್ಲವೆಂದು ಪ್ರತಿಪಾದನೆ ಮಾಡುವುದಕ್ಕೆ ಕಾರಣ ಇನ್ನೂ ಹೆಚ್ಚಿಗೆ ಇರುತ್ತದೆ. ಒಟ್ಟಿನಲ್ಲಿ ನನಗನ್ನಿಸುತ್ತದೆ.—ಈ ವಿಲೀನೀಕರಣದಿಂದೇನೋ ಕೆಲವು ಅನುಕೂಲಗಳಾದರೂ ದೇಶದ ಹಿತದೃಷ್ಟಿಯಿಂದ ಇದು ಸಾಧುವಲ್ಲ. ಸರ್ಕಾರದವರೂ ಕೂಡ ಇದನ್ನು ಪ್ರತಿಪಾದನೆಮಾಡಬೇಕಾದ ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಒದ್ದಾಡುತ್ತಿರಬಹುದೆಂದು ಕಾಣುತ್ತದೆ. ಅಂತರಂಗದಲ್ಲಿ ಯಾರಿಗೂ ಇದು ಇಚ್ಛೆಯಿಲ್ಲವೆಂದು ನಾನು ಭಾವಿಸುತ್ತೇನೆ. ಇದೇ ರೀತಿಯಲ್ಲಿ ಅನೇಕ ವಿಚಾರಗಳು ಮುಂದೆ ಬರುತ್ತವೆ. ಆಗಲೂ ಇದೇ ರೀತಿ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳದೆ ತೀರ್ಮಾನಮಾಡುವುದಾದರೆ, ಅದು ಖಂಡಿತವಾಗಿಯೂ ಪ್ರಜಾಪ್ರಭುತ್ವ ಪದ್ಧತಿಗೆ ವಿರೋಧವಾಗಿರುತ್ತದೆಂದು ನಾನು ಹೇಳುತ್ತೇನೆ. ಈಗ ಮಾಡಿರುವುದೂ ಕೂಡ ಕೇವಲ ಒಂದು ಅನಿವಾರ್ಯ ಪಕ್ಷಕ್ಕೆ ಸಿಕ್ಕಿ ಮಾಡಿದೆಯೆಂದು ನಾನೆಣಿಸುತ್ತೇನೆ.

ಇನ್ನು ಆಹಾರದ ನೀತಿಯು ವಿಚಾರವಾಗಿ ಒಂದೆರಡು ಮಾತು. ಈ ಸಂಬಂಧದಲ್ಲಿ ನಬ್ಸಿಡೈಸ್‌ಮಾಡುವ ನೀತಿ, ಆಹಾರದ ಉತ್ಪತ್ತಿಯ ನೀತಿ ಮತ್ತು ಆಹಾರದ ಹಂಚಿಕೆ ನೀತಿ—ಎಂದು ಮೂರು ಭಾಗಗಳಿವೆ. ನಬ್ಸಿಡೈಸ್ ಮಾಡುವ ವಿಚಾರದಲ್ಲಿ ಹೇಳುತ್ತಾ ಜನಾಬ್ ಇಮಾಂರವರು ಮಾರುವ ಬೆಲೆಯನ್ನ ಹೆಚ್ಚುಮಾಡಿದ್ದನ್ನು ಆಕ್ಷೇಪಿಸಿದರು. ಮಾರುವ ಬೆಲೆ 'ಹೆಚ್ಚು ಹೆಚ್ಚು' ಎನ್ನುವುದು ಬರೀ ಇವತ್ತೇ ಹೇಳುವುದಿಲ್ಲ, ರೂಪಾಯಿಗೆ ಇಪ್ಪತ್ತು ಸೇರು ಮಾರುತ್ತಿದ್ದರೂ ಅವತ್ತೂ ಹೇಳುತ್ತಾರೆ. ಹಿಂದೆ ಒಮ್ಮೆ ರೂಪಾಯಿಗೆ 20 ಸೇರು ಮಾರುತ್ತಿದ್ದಾಗಲೂ "ಏನಪ್ಪಾ ಹೇಗೆ ಕೊಂಡುಕೊಳ್ಳುವುದು" ಎಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಇದೆಲ್ಲಾ ನಾನಾ ವಿಷಯಗಳನ್ನು ಅವಲಂಬಿಸಿಕೊಂಡಿದೆಯೆಂಬುದನ್ನು ನಾವು ತಿಳಿಯಬೇಕು. ಇದುವರೆಗೂ ತಾವು ಏನೋ ಒಂದು 'ನಬ್ಸಿಡೈಸ್' ಮಾಡುವ ನೀತಿಯನ್ನು ಅನುಸರಿಸುತ್ತಾ ಬಂದಿರಿ. ದೇಶದ ಸಾರ್ವಜನಿಕರ ಹಣವನ್ನು ಯಾರಿಗೋ ಕೆಲವರಿಗೆ ಮಾತ್ರ ಉಪಯೋಗಪಡಿಸುವುದಕ್ಕಾಗಿ ವಿನಿಯೋಗಿಸುವುದು ನ್ಯಾಯವಲ್ಲವೆಂದು ಅನೇಕ ಸಾರಿ ನಾನು ಹೇಳಿದ್ದೇನೆ. ಹಾಗೆ ಜನರಿಗೆ ಉಪಯೋಗ ಮಾಡಬೇಕೆಂದೆಣಿಸಿದರೆ ಪಕ್ಷಪಾತವಿಲ್ಲದೆ ದೇಶದವರೆಲ್ಲರಿಗೂ ಸಮನಾಗಿ ಹಂಚಬೇಕು. ನೀವೀಗ ನಬ್ಸಿಡೈಸ್ ಮಾಡುತ್ತಿರುವುದು ಯಾರಿಗಾಗಿ! ಅದೂ, ಅದನ್ನು ಈ ಸರ್ಕಾರದವರು ಮೊದಲುಮಾಡಿದ್ದಲ್ಲ! 1943ನೆಯ ಇನವಿಯಿಂದ ಕೋಟ್ಯಾಂತರ ರೂಪಾಯಿಗಳನ್ನು ಸಾರ್ವಜನಿಕರ ಹಣದಿಂದ ತೆಗೆದು ಹಂಚಿದ್ದೀರಿ. ಪಟ್ಟಣಗಳಲ್ಲಿ ರೇಷ್ಟ್ ಡಿಪೋಗಳನ್ನಿಟ್ಟು ರೇಷ್ಟ್ ಕಾರ್ಡುಗಳನ್ನು ಯಾರಿಗೆ ಕೊಟ್ಟಿದ್ದೀರೋ ಅವರಿಗಾಗಿ ಈ ಹಣವನ್ನು ಕೊಡುತ್ತಿದ್ದೀರೆ ಹೊರತು, ಹಳ್ಳಿಗಾಡಿನಲ್ಲಿ ಅನ್ನಕ್ಕೆ ಗತಿಯಿಲ್ಲದೆ ಊರೂರಿಗೆ ಅಲೆದು, ಕಾಳಸಂತೆಯಲ್ಲಿ ಕೊಂಡು ತಂದು ತಿನ್ನಬೇಕಾಗಿರುವವರನ್ನು ಪರಮಾತ್ಮನ ಕೈಗೇ ಬಿಟ್ಟು, ಇಲ್ಲ ಬೆಂಗಳೂರು, ಮೈಸೂರು ಸಿಟಿಗಳಲ್ಲಿರುವವರಿಗೆ ಹಣ ಕೊಟ್ಟು ಸಹಾಯಮಾಡುತ್ತಿದ್ದೀರಿ. ಈ ನೀತಿ ಸರಿಯೆ! ಏನೇ ಆಗಲಿ, ಇವರುಗಳಿಗೆ ಆಹಾರವನ್ನು ಹಂಚುವುದರಲ್ಲಿ ಕೇವಲ ನಮ್ಮ ಅಸಲು ಬೆಲೆಗೆ (Service at cost) ಕೊಡಬಹುದೇ ಹೊರತು ಯಾಪೊಬ್ಬನಿಗೇ ಆಗಲಿ ದುಡ್ಡಿನಲ್ಲಿ ರಿಯಾಯಿತಿ ಮಾಡಬೇಕೆನ್ನುವುದು ಸರಿಯಲ್ಲ. ಒಂದು ವೇಳೆ ಕೊಡಬೇಕಾದರೆ, ಎಲ್ಲರಿಗೂ ಕೊಡುವ ಏರ್ಪಾಡುಮಾಡಬೇಕು. ಹಳ್ಳಿಗಾಡಿನ ಪರಿಸ್ಥಿತಿ ಹೇಗಿದೆಯೆಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಅದನ್ನು ಕೇಳಿದರೆ ಕಣ್ಣೀರು ಬರುತ್ತದೆ!! ಚಾಮರಾಜನಗರ, ಗುಂಡ್ಲು ಪೇಟೆ, ಯಳಂದೂರು, ಟಿ. ನರಸೀಪುರ—ಈ ತಾಲ್ಲೂಕುಗಳಲ್ಲಿ ಅನ್ನದ ಅಭಾವ ತರೆದೋರಿರುವುದರಿಂದ ಆ ಜನರ ಕಷ್ಟ ಹೇಳತೀರದು! ಕಬ್ಬಳ್ಳಿಯೆಂಬುದು ಯಳಂದೂರಿನಲ್ಲಿ ಬೆಟ್ಟದ ಬುಡದಲ್ಲಿದೆ. ಅಲ್ಲಿಂದ ಕೊಡಗಿನಲ್ಲಿ ಕೊಪ್ಪಕ್ಕೆ ಹೋಗಿ 6 ರೂಪಾಯಿ—8 ರೂಪಾ

ಯಿಗೆ ಕೊಂಡುಕೊಂಡು ಕಳ್ಳರಂತೆ ನೂರಾರು ಜನ, ಇರುವೆಗಳು ಅಕ್ಕಿಕಾಳನ್ನು ತಗೆದುಕೊಂಡುಹೇಗೆಹೋಗುತ್ತಿರುತ್ತವೋ ಹಾಗೆ ಹೋಗುತ್ತಿರುವುದನ್ನು ನೋಡಿದರೆ, ಆ ಪಾಪಿಗಳು ಇಂಥ ಜನ್ಮವಿಟ್ಟುಕೊಂಡಿರುವುದಕ್ಕಿಂತ ಯಾವುದಾದರೂ ವಿಷ ತೆಗೆದುಕೊಂಡು ಸತ್ತರೇ ಒಳ್ಳೆಯದೆಂದೆನಿನುತ್ತದೆ. ಅಂಥವರಿಗಾಗಿ ಡಿಫೋಗಳನ್ನಿಟ್ಟು ಸಬ್ಸಿಡೈಸ್ ಮಾಡಿಕೊಡುತ್ತಿದ್ದೀರಾ ! ಆವರಿಗೆ ಕೊನೆಯಪಕ್ಷ 50 ಸೇರಾದರೂ ಒಮ್ಮೆ ತೆಗೆದುಕೊಂಡುಹೋಗಬಹುದೆಂದು ಒಂದು ವಿಧದಲ್ಲಿ ಹತೋಟಿಯನ್ನು ಸಡಿಲ ಮಾಡಿಕೊಟ್ಟು ಸಹಾಯಮಾಡಿದ್ದೀರಾ ? ಯಳಂದೂರು ತಾಲ್ಲೂಕಿನಿಂದ ಪೆರಿಯಾಪಟ್ಟಣಕ್ಕೆ ಹೋಗಿ ದವಸವನ್ನು ತೆಗೆದುಕೊಂಡು ಹೋದರೆ ಅವರಿಗೆ ರೂಪಾಯಿಗೆ ಒಂದೂವರೆ ಸೇರಿನಂತೆಯೂ ಆಗುವುದಿಲ್ಲ, ಬ್ಲಾಕ್‌ಮಾರ್ಕೆಟ್ಟಿನ ದರಕ್ಕಿಂತಲೂ ಹೆಚ್ಚಾಗುತ್ತದೆ. ನಿನ್ನೆ ದವಸ ಕೂಡ ನಮಗಿಲ್ಲಿ ಒಳ್ಳೆ ಮಸಾಲೆ ದೋಸೆ ಸಿಕ್ಕಿತು ! ಅದೇ ಹಳ್ಳಿಯಲ್ಲಿ ಇಂಥಾದ್ದೇನಾದರೂ ಇದೆಯೇ ? ಆದ್ದರಿಂದ ಸರ್ಕಾರದ ಆಹಾರದ ನೀತಿ ಸರಿಯಲ್ಲ. ಇಷ್ಟೇನೂ ಹೊಸದಾಗಿ ನೀವು ಮಾಡಿದ್ದಲ್ಲ. ಹಿಂದಿನಿಂದ ಬಂದದ್ದು. ಈ ಸರ್ಕಾರದವರೂ ಈಗತಾನೆ ಸ್ವಲ್ಪ ಮನಗಂಡಿದ್ದಾರೆಂದು ಹೇಳಬೇಕು. ಬೆಂಗಳೂರು ಮೈಸೂರಿನಲ್ಲಿ ಬೇಕಾದಷ್ಟು ಹಣ ಹಾಕಿಕೊಂಡು ಕಳಿತು ಲೇವಾದೇವಿ ವ್ಯಾಪಾರ ಮಾಡುವವರಿಗೆ ದವಸವನ್ನು ನೀವು ತಗ್ಗಿನಲ್ಲಿ ಕೊಂಡು ಅಗ್ಗದಲ್ಲಿ ಮಾರಬೇಕೆನ್ನುವುದು ಸರಿಯಲ್ಲ. ಆದ್ದರಿಂದ ತಾವು ಮಾಡಿರುವುದು ನ್ಯಾಯವಾಗಿದೆ. ಅಷ್ಟೇ ಅಲ್ಲ ; ಧೈರ್ಯವಾಗಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದೂ ನನಗೊಪ್ಪಿಗೆ. ಯಾವ ಮನುಷ್ಯನಿಗೇ ಆಗಲಿ ನಿಮಗೆ ನ್ಯಾಯವಾಗಿ ಯಾವ ದರ ಬಿದ್ದಿದೆಯೋ ಅದರಂತೆ ಮಾರಬೇಕು. ಅದರ ಮೇಲೆ ಒಂದು ಕಾಸನ್ನೂ ಕೂಡ ಹೆಚ್ಚಿಗೆ ವೋಟ್ ಮಾಡುವ ಹಾಗೆ ನಾವಿಲ್ಲ. ಮನಸ್ಸು ತೀರಾ ನೊಂದು ನಾನು ಇಷ್ಟುಮಾತ್ರ ಹೇಳುತ್ತೇನೆ. ನಿಮ್ಮ ಈ ನೀತಿ ನ್ಯಾಯವಲ್ಲ; ನಾನು ಹೇಳಿದ ನೀತಿಯನ್ನು ನೀವು ಪಾಲಿಸಿದರೇ ನಿಮಗೆ ದೇಶದಲ್ಲಿ ಮಾನ್ಯತೆ, ಗೌರವ ಬರುತ್ತದೆ, ನ್ಯಾಯ ಪ್ರತಿಷ್ಠೆ ಮಾಡುವವರೆಂದು ಒಂದು ಕೀರ್ತಿ ಬರುತ್ತದೆ. ಇದು ಬಿಟ್ಟು ಹಳ್ಳಿಗಾಡಿನವರನ್ನು ಕೇಳುವವರೇ ಇಲ್ಲವೆಂದರೆ ಏನು ಹೇಳುವುದು ! ಇಂದು ನನಗನ್ನಿಸುತ್ತದೆ, ಆ ಮೂಕ ಪ್ರಾಣಗಳಿದ್ದಾರಲ್ಲ, ಪೆರಿಯಾಪಟ್ಟಣದಷ್ಟು ದೂರ ಹೋಗಿ 50–60 ಸೇರು ಕಳ್ಳತನದಲ್ಲಿ ಹೊತ್ತುಕೊಂಡು ಬಂದು ಮನೆ ಮಕ್ಕಳನ್ನು ಸಾಕುತ್ತಿರುವ ಆ ಪಾಪಿಗಳು,—ಅವರಿಗೆ ಮಾತುಬಂದಿದ್ದರೆ ಯಾವ ಸರ್ಕಾರವೂ ಉಳಿಯುತ್ತಿರಲಿಲ್ಲ ! ಪಾಪ, ಅವರು ಯಾರ ಕೈಯಲ್ಲಿ ಹೇಳಿಕೊಳ್ಳುವುದು! ಪೋಲೀಸಿನವರು ಕಂಡರೆ ತಲೆಯಮೇಲೆ ಹೊಡೆಯುತ್ತಾರೆ. ಸತ್ತು ಹೋದರೂ ಅವರನ್ನು ಕೇಳುವವರು ಯಾರು ? ಪೆರಿಯಾಪಟ್ಟಣದಲ್ಲಿ ನಡೆದ ಒಂದು ಪ್ರಸಂಗವನ್ನು ನಿಮಗೆ ಹೇಳುತ್ತೇನೆ. ರಾತ್ರಿ ಹನ್ನೆರಡು ಘಂಟೆ ಹೊತ್ತಿನಲ್ಲಿ 300 ಜನ ದವಸ ಹೊತ್ತುಕೊಂಡು ಬರುತ್ತಿದ್ದವರು ಪೋಲೀಸಿನವರಿಗೆ ಹೆದರಿಕೊಂಡು ಕಾಡಿನಲ್ಲಿ ಅಲ್ಲೇ ಕುಳಿತುಕೊಂಡಿದ್ದರು. ಅಕಸ್ಮಾತ್ತಾಗಿ ನಾನು ಆ ಕಡೆ ಹೋಗುತ್ತಿದ್ದವನು ಇವರನ್ನು ನೋಡಿದೆ. ಏನು ವಿಷಯವೆಂದು ವಿಚಾರಿಸಿದ್ದರಲ್ಲ, ಪೋಲೀಸಿನವರು ಹನ್ನೊಂದು ಜನರನ್ನು ಪೋಲಿಸ್ ಸ್ಟೇಷನ್ನಿನಲ್ಲಿ ಹಿಡಿದು ಹಾಕಿ ಅವರ ರಾಗಿ ದವಸವೆಲ್ಲವನ್ನೂ ತೆಗೆದುಕೊಂಡಿದ್ದಾರೆಂದು ಗೊತ್ತಾಯಿತು. ಹಳ್ಳಿಗಾಡಿನ ಕಡೆ ಇಂಥಾ ಪರಿಸ್ಥಿತಿಗಳನ್ನು ನಾವು ಎದುರಿಸಬೇಕಾಗಿದೆ. ಇಂಥ ಪರಿಸ್ಥಿತಿ ಬೆಂಗಳೂರು ಪಟ್ಟಣದಲ್ಲೇನಾದರೂ ನಡೆದಿದ್ದರೆ ಅಠಾರಾ ಕಛೇರಿಗೆ ಮುತ್ತಿಗೆ ಹಾಕುತ್ತಿದ್ದರು ಏನು ರಕ್ಷಣೆಯನ್ನು ಸರ್ಕಾರ ಆ ಬೇಸತ್ತ ಬಡ ಜನರಿಗೆ ಕೊಟ್ಟಿದೆ ! ಹಾಗೆ ಒಂದಕ್ಕೆ ನಾಲ್ಕುರಷ್ಟನ್ನು ಕೊಟ್ಟು ತರಲು ಆ ಬಡ ಜನರಿಗೆ ದುಡ್ಡು ಎಲ್ಲಿಂದ ಬಂದಿತೆಂದು ತಾವು ಕೇಳಬಹುದು. ಅದಕ್ಕೆ ಉತ್ತರ ಅವರು ತಮ್ಮ ಮನೆ, ಮಠಗಳನ್ನು ಮಾರಿ ತಮ್ಮ ಹೊಟ್ಟೆ ಹೊರೆಯುತ್ತಿದ್ದಾರೆ. ಈಗ ಬಸ್ಸಿನವರೂ ಸಹ ಕಾಳಸಂತೆಯ ವ್ಯಾಪಾರಕ್ಕೆ ಪ್ರಾರಂಭ ಮಾಡಿದ್ದಾರೆ. 4–5 ರೂಪಾಯಿಗಳನ್ನು ಹೆಚ್ಚಾಗಿ ಕೊಡುತ್ತೇವೆಂದರೆ ಅವರೇ ಸ್ಪೆಷರ್-ಟ್ರಿಪ್ ಹೊಡೆದು ಚಾಮರಾಜನಗರದಕಡೆಯಿಂದ ಧಾನ್ಯಗಳನ್ನು ಈ ಕಾಳಸಂತೆಯಲ್ಲಿ ಸರಬರಾಯಿಮಾಡಲು ಪ್ರಾರಂಭಮಾಡಿದ್ದಾರೆ. ಆ ಪ್ರದೇಶದಲ್ಲಿ ಒಂದು ರೂಪಾಯಿಗೆ ಒಂದೂವರೆಸೇರಿನಂತೆ ರಾಗಿ —ಜೋಳ ದೊರೆಯುತ್ತದಂತೆ. ಆ ಜನರು ಹೇಳುತ್ತಾರೆ— "ಸ್ವಾಮಿ ದುಡ್ಡನ್ನು ಹೇಗಾದರೂ ಮಾಡಿ ತರುತ್ತೇವೆ; ಇಲ್ಲದಿದ್ದರೆ ನಮ್ಮ ಹೆಂಡತಿ ಮಕ್ಕಳು ಉಳಿಯುವುದಿಲ್ಲ ಎಂದು. ನನಗೆ ಗೊತ್ತಿರುವ ಹಾಗೆ ಅನೇಕರು ತಮ್ಮ ಸಾವಿರ ರೂಪಾಯಿ ಬೆಲೆ ಬಾಳುವಂಥ ಆಸ್ತಿಗಳನ್ನು, ಸಹ ಕೇವಲ ಐದುನೂರು ರೂಪಾಯಿಗಳಿಗೇ ಮಾರಿ ತಮ್ಮ ಹೊಟ್ಟೆ ಹೊರೆದಿದ್ದಾರೆ. ಈ ಬಗ್ಗೆ ತಾವು ಸತ್ಯಾಂಶವನ್ನು ತಿಳಿಯಲೇಬೇಕೆಂದಿದ್ದರೆ ತಾವು ಒಂದು ಸಮಿತಿಯನ್ನು ಈ ಬಗ್ಗೆ ನೇಮಕಮಾಡಿ, ನೋಡಿ.

I will give evidence. Does not my friend think that it is desirable to take poison and die? (Voices - No, no) It is not worthwhile. Therefore, I appeal to the Government to stop all subsidies to-day and we do not want to subsidise any man in the country unless the man is most deserving. If there is such a case, please consult us. You will rise in the estimation of the people, in the estimation of God. This is about distribution policy.

Now, in regard to production policy, we are all men who have come here to see things eye to eye and solve the problem. We have somehow to solve the problem. ಇನ್ನು "ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ" ಯೋಜನೆಯನ್ನು ತೆಗೆದುಕೊಳ್ಳೋಣ. ಈ ದಿವಸದವರೆಗೂ ಈ "ಹೆಚ್ಚು ಆಹಾರ ಬೆಳೆಯುವ" ಯೋಜನೆಯ ಸಂಬಂಧವಾಗಿ ನಮ್ಮ ಸರ್ಕಾರದವರು ಏನು ಮಾಡಿದ್ದಾರೆ ! ಲಕ್ಷಾಂತರ ಮತ್ತು ಕೋಟ್ಯಾಂತರ ರೂಪಾಯಿಗಳ ಖರ್ಚನ್ನೇನೋ ಮಾಡಲಾಗಿದೆ. ಆದರೆ ಈ ದಿವಸದ ವರೆಗೂ ಆ ಹಿಂದುಳಿದಿರುವ ಹಳ್ಳಿಗಳು ಆ ಕನಿಷ್ಠ ಸ್ಥಿತಿಯಲ್ಲೇ ಉಳಿದಿವೆ. "ಅವರ ಪರಿಸ್ಥಿತಿ ಏನಾಗಿದೆ" ಎಂದು ಕೇಳತಕ್ಕವರೇ ಇಲ್ಲ. As a matter of fact, the present Ministry is anxious to see that things are brought to order. There should be proper approach. You are all agreed that there is something wrong somewhere. Where it is wrong, it is there we have got to use our intelligence and capacities. Somewhere we are wrong. ಆದರೆ ನೀವು ರಚನಾತ್ಮಕ ಕಾರ್ಯಗಳು ಮಾಡು

ತ್ತಿಲ್ಲವೆಂದು ನನ್ನ ಅಭಿಪ್ರಾಯವಲ್ಲ ಮತ್ತು ನಾನು ಆ ರೀತಿ ಹೇಳುತ್ತಿಲ್ಲ. ಆದರೆ ತಾವು ಹಾಕಿಕೊಂಡಿರ ತಕ್ಕ ರಚನಾತ್ಮಕ ಕಾರ್ಯಗಳ ಪ್ರಯೋಗ, ವಿಧಾನ ಮತ್ತು ಅದನ್ನು ತ್ವರಿತವಾಗಿ ಮಾಡದೆ ಇರುವುದೇ ಇಷ್ಟೆಲ್ಲಾ ತೊಂದರೆಗಳಿಗೆ ಕಾರಣ. To remove indebtedness of the agriculturists is the fringe of the problem. ಇದರಲ್ಲಿ ನನಗೆ ಏನು ತಪ್ಪು ಕಾಣಿಸುತ್ತಿದೆಯೆಂದರೆ—ತಾವು ಔಷಧಿಯನ್ನೇನೋ ಸರಿಯಾಗಿ ಕೊಡುತ್ತೀರಿ ; ಆದರೆ ರೋಗದ ಪರೀಕ್ಷೆ ಮಾತ್ರ ಸರಿಯಾಗಿಲ್ಲ, ಎಂಬುದು ತಾವು ರೋಗದ ಪರೀಕ್ಷೆಯನ್ನು ಮಾಡಿ, ಏನು ಖಾಯಿಲೆ ಎಂಬುದನ್ನು ನಿರ್ಧರಿಸಿ, ಅದಕ್ಕೆ ತಕ್ಕ ಔಷಧಿಯನ್ನು ಕೊಟ್ಟರೆ ಆಗ ನಿಮ್ಮ ಕಾರ್ಯಭಾಗಗಳನ್ನು ನಾವು ಒಪ್ಪುತ್ತೇವೆ—ಅವು ಸರಿಯೆಂದೂ ಹೇಳುತ್ತೇವೆ. ಯಾವನು ಬೆಳೆಯಬೇಕೋ—ಅವನೇ ಬೆಳೆಯಬೇಕು. ಹಾಗಿಲ್ಲದೆ ಇತರೇಯವರಿಗೆ ನೀವು ಪಲ್ಲಾ ಒಂದಕ್ಕೆ 20 ರೂಪಾಯಿಗಳಿಗೆ ಬದಲಾಗಿ 50 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರೂ ಅವರು ಹೊಲಕ್ಕೆ ಹೋಗಿ ಬೆಳೆ ಬೆಳೆಯಲು ಸಾಧ್ಯವಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಒಬ್ಬಿಬ್ಬರು ದೊಡ್ಡ ಮನುಷ್ಯರು ಹಾಗೆ ಮಾಡಬಹುದು. ಆದರೆ ಅದರಿಂದಾಗುವ ಪ್ರಯೋಜನವೆಷ್ಟು ? ಆದಕಾರಣ ಕನಬುದಾರನಲ್ಲದ ಮನುಷ್ಯನಿಗೆ ನೀವು ಎಷ್ಟೇ ಉತ್ತೇಜನ ಕೊಟ್ಟರೂ ಅದರಿಂದ ಸಾರ್ಥಕವಾಗಲಾರದು. ಆದರೆ ರೈತನಿಗಿರುವ ದುರ್ಬಲತೆಯೇನು ಎಂಬುದನ್ನು ಸರ್ಕಾರದವರು ಸರಿಯಾಗಿ ತಿಳಿದುಕೊಂಡಿಲ್ಲ. ಮಾತೆತ್ತಿದರೆ "ನಾವು ಗೊಬ್ಬರ ಕೊಡುತ್ತೇವೆ, ಗುಳ ಕೊಡುತ್ತೇವೆ" ಎಂದು ಇತ್ಯಾದಿ ಹೇಳುತ್ತೀರಿ. ಅಷ್ಟಾದರೆ ಈ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆ ಎಷ್ಟರಮಟ್ಟಿಗೆ ಮುಂದುವರಿದೀತು ? I am in clash with such of those people who are not agriculturists.

ನೀವು ನಬ್‌ಸಿಡೈಸ್ ಮಾಡುವ ನೀತಿಯೇ ಸರಿಯಾಗಿಲ್ಲ. ನೀವು ಮುಖ್ಯವಾಗಿ "ರೈತನ ಮಿಷನೆರಿ" ಎಲ್ಲಿ ಕೆಟ್ಟುಹೋಗಿದೆಯೆಂಬುದನ್ನು ಮೊದಲು ಕಂಡುಹಿಡಿದು, ಅದನ್ನು ಸರಿಪಡಿಸಿ ನಂತರ ಆ ಯಂತ್ರಕ್ಕೆ ತಕ್ಕಷ್ಟು ಪೆಟ್ರೋಲನ್ನು ಹಾಕಿದರೆ, ಆಗ ಅದು ತಾನೇತಾನಾಗಿ ಮುಂದಕ್ಕೆ ಹೋಗುತ್ತದೆ. ಅಷ್ಟು ಮಾಡಿದರೆ ಸಾಕು. ಆಗ ಇಷ್ಟೆಲ್ಲಾ ಪ್ರಚಾರ ಮಾಡಬೇಕಾದ ಆವಶ್ಯಕವೇ ಇರುವುದಿಲ್ಲ. ಆತನೇ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾನೆ. ಅವನಿಗೆ ಬೇಕಾದ್ದು ದುಡ್ಡು. Even to him do not subsidise because as my friend said, there is likelihood of middle man making use of it. ಅವನಿಗೆ ದುಡ್ಡಿನ ತ್ರಾಣವಿಲ್ಲ. ನೀವು ಆತನಿಗೆ ಗೊಬ್ಬರ ಇತ್ಯಾದಿ ಸಾಮಾನುಗಳನ್ನು ಅರ್ಧ ಬೆಲೆಗೆ ಕೊಡುತ್ತೇವೆಂದು ಹೇಳಿದಾಗ್ಯೂ ಆತನಿಗೆ ಶಕ್ತಿ ಇರುವುದಿಲ್ಲ. ಏನೋ ನೂರಾರು—ಸಾವಿರಾರು ರೂಪಾಯಿಗಳ ಚಲಾವಣೆಯ ಮನುಷ್ಯನಿಗೆ ಅದರಿಂದ ಅನುಕೂಲವಾಗಬಹುದು ; ಅಷ್ಟೆ, ಬಡವನಿಗಂತೂ ಶಕ್ತಿ ಇಲ್ಲ. ಅಷ್ಟರಿದ್ರಾವಸ್ಥೆಯಲ್ಲಿದ್ದಾನೆ. That is the primary consideration. If anybody is under the impression that the ryot is better off economically it is a wrong and incorrect impression. The ryot is as poor and indebted as ever. To remove the indebtedness of the ryot is the fringe of the problem. ಒಂದು ಭಾವಿ ತೆಗೆಸಬೇಕಾಗಿದ್ದರೆ 4,000 ರೂಪಾಯಿಗಳಿಗಿಂತಲೂ ಕಮ್ಮಿ ಆಗಲಾರದು. ಆದರೆ ನೀವು ಆ ಬಗ್ಗೆ ಕೊಡುವುದೆಷ್ಟು, ಕೇವಲ ಒಂದು ಸಾವಿರ ಅಥವ 500 ರೂಪಾಯಿಗಳು. ಇನ್ನು 3,000 ರೂಪಾಯಿಗಳನ್ನು ತನ್ನ ಕೈಯಿಂದ ಹಾಕಿ ಭಾವಿ ತೆಗೆಸುವ ಚೈತನ್ಯವಿದ್ದಿದ್ದರೆ ಆತನು ನಿಮ್ಮ ಹತ್ತಿರಕ್ಕೆ 500 ರೂಪಾಯಿಗೆ ಏಕೆ ಬರುತ್ತಿದ್ದ ? ಬಹುಶಃ ಈ ಮಾರ್ಗದಿಂದ ಅರ್ಜಿ ಬರೆದವರು ಮೊದಲುಗೊಂಡು ಹಣ ಮಂಜೂರಾಗುವತನಕ ಮಧ್ಯೆ ಇರತಕ್ಕವರು ಹಂಚಿಕೊಂಡು ತಿನ್ನಲು ಅವರಿಗೆ ಅನುಕೂಲವಾಗಿರಬಹುದು. ಬೇಸಾಯಗಾರನಿಗೇನೂ ಇದರಿಂದ ಅನುಕೂಲವಾಗಿಲ್ಲ. ಆದರೆ ನಿಮ್ಮ ಉದ್ದೇಶವೇನೋ ಒಳ್ಳೆಯದೇ. ತಾವು ಕೊಡುವುದನ್ನು 'ಸಾಲ' ಎಂದು ಕೊಡಿ. ಕೊಡುವುದನ್ನು ಆ ಕೆಲಸಕ್ಕೆ ಆಗುವಷ್ಟನ್ನೂ ಕೊಡಬೇಕು. Capital at the time when he requires, to the extent he requires and at reasonable rates of interest. Even there I do not say "Give it free". As a matter of fact you are giving money for wells. To a very great extent it is not being made use of properly.

Mr. SPEAKER.—What more time does the Honourable Member require ?

Sri H. M. CHANNABASAPPA.—I will finish very shortly. All our idealogies, all our aspirations are very good ; but the approach is not correct.....

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಹಾ ಪಂಗಡ).—ಶ್ರೀಮದ್ ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿ ಅನೇಕ ಮಹತ್ವದ ವಿಷಯಗಳು ಅಡಗಿವೆ. ಆದುದರಿಂದ ಈ ವಿಚಾರದಲ್ಲಿ ಮಾತನಾಡತಕ್ಕವರು ಇನ್ನೂ ಹೆಚ್ಚಾಗಿದ್ದಾರೆ. ಮಾತನಾಡಬೇಕೆಂಬ ಕುತೂಹಲ ಅನೇಕರಿಗಿರುವಂತಿದೆ. ದಯೆಯಿಟ್ಟು ಅಧ್ಯಕ್ಷರು ಇದನ್ನು ನಾಳೆಗೂ ಮುಂದುವರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಈಗಾಗಲೆ ಬಹಳ ವೇಳೆಯಾಗಿದೆ. ಉತ್ತರ ಕೊಡತಕ್ಕವರಿಗೂ ಸಹ ವೇಳೆ ಇಲ್ಲ.

ಅಧ್ಯಕ್ಷರು.—ಆದರೆ ಕಾರ್ಯಕ್ರಮದ ಪಟ್ಟಿಯಲ್ಲಿ ಈ ದಿವಸಕ್ಕೆ ಮಾತ್ರವೇ ಹಾಕಿಕೊಂಡಿದೆ.

ಶ್ರೀ ಎಂ. ಮಾದಯ್ಯನವರು.—ಡೀಲಮಿಟೇಷನ್ ಕಾನ್‌ಸ್ಟಿಟ್ಯುಯೆನ್ಸಿಗೆ ನಾಳೆ ಮತ್ತು ನಾಡಿದ್ದೂ ಅವಕಾಶ ಕೊಡಬಹುದು. ಅದೂ ಕೂಡ ಬಹಳ ಪ್ರಾಮುಖ್ಯವಾದದ್ದು. ಆದ್ದರಿಂದ ತಾವು ದಯೆಯಿಟ್ಟು ಇದನ್ನು ನಾಳೆಗೂ ಮುಂದುವರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ತಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮದ ಪ್ರಕಾರ, ಆಹಾರ ವಿಚಾರದಲ್ಲಿ ನಾವು 1950ರ ಅಂತ್ಯದೊಳಗೆ ಸ್ವಪರಿಪೂರ್ಣತೆಯನ್ನು ಹೊಂದಲು ಖಂಡಿತ ಸಾಧ್ಯವಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಈಗಾಗಲೇ 40—50 ದಿವಸಗಳಿಗೆ ಆಗುವಷ್ಟು ಮಾತ್ರ ಆಹಾರವಿದೆಯೆಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಅಂದಮೇಲೆ ಆ 50 ದಿವಸಗಳು ಕಳೆದನಂತರ 51ನೆಯ ದಿವಸಕ್ಕೆ ಆಹಾರ ಒದಗಿಸಲು ಏನು ಮಾಡಿದ್ದೀರಿ ? Therefore a very serious situation has arisen.

ಇದನ್ನೆಲ್ಲಾ ಯೋಚನೆಮಾಡಿ ಪ್ರಾಜೆಕ್ಟುಗಳಿಗೆ ಸರಿಯಾದ ಏರ್ಪಾಡು ಮಾಡಬೇಕು. What is the good of consulting somebody else for something else? ನನ್ನನ್ನು ಕರೆದುಕೊಂಡು ಬಂದು ಕೈಗಾರಿಕೆಗಳ ಮೇಲೆ ಸಲಹೆ ಕೊಡು ಎಂದು ಹೇಳಿದರೆ ನಾನು ಏನು ಮಾಡಬಹುದು? ಯಾವ್ಯಾವ ಬಾಬಿನಲ್ಲಿ ಯಾರು ಪರಿಣತರೋ ಅವರನ್ನ ವಿಚಾರಮಾಡಿ ಪ್ರಾಕ್ಟಿಕಲ್ಲಾಗಿ ಪ್ರಾಜೆಕ್ಟ್ ಮಾಡಿದರೆ ಬಹುಶಃ ಸಾಧ್ಯವಾಗಬಹುದು ಎಂದು ಅಭಿಪ್ರಾಯ ಪಡುತ್ತೇನೆ. One suggestion that I would like to throw is this: ಇದುವರೆಗೆ ಸಬ್ಸಿಡಿಗಾಗಿ ಬೇಕಾದಷ್ಟು ಹಣ ತೆತ್ತಿದ್ದೇವೆ. ಇನ್ನು ಮುಂದೆ ಆ ಬಾಬಿಗೆ ಹೆಚ್ಚಾಗಿ ಹಣ ವ್ಯಯ ಮಾಡುವುದನ್ನು ತಡೆಯಬೇಕು. Thereby I do not mean that the Government should be a business concern. I would like that the Government should do banking business. Government must create a Banking concern, which will facilitate and increase the economic machinery. ಯಾವ ವ್ಯವಸ್ಥೆ ಮಾಡಿದರೂ ಯೋಚನೆಮಾಡಿ ಯಾವ ರೀತಿ ಮಾಡಿದರೆ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೇಕಾದ ವಸ್ತುವನ್ನು ಒದಗಿಸಬಹುದು ಎಂಬುದನ್ನು ಯೋಚನೆ ಮಾಡಬೇಕು. ಮುಖ್ಯವಾಗಿ ಯಾವುದಕ್ಕೂ ಹಣ ಬೇಕು, ಹಣವಿಲ್ಲದ್ದರಿಂದ ಕೆಲಸಗಳು ಮುಂದುವರಿದಿಲ್ಲ ಎಂದು ಶ್ರೀಮನ್ಮಹಾರಾಜರವರೇ ಹೇಳಿದ್ದಾರೆ. ಬಸ್ ಸರ್ವಿಸ್ಸುಗಳನ್ನು ಹರಾಜು ಹಾಕಿದರೆ ಕೋಟ್ಯಾಂತರ ರೂಪಾಯಿಗಳು ಬರುತ್ತವೆ. ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದಾರೆ. ಆದರೆ ಬಸ್ಸಿನ ಒಂದು ನಟ್ ಹೋದರೆ ಅದಕ್ಕೆ 25 ರೂಪಾಯಿ ಖರ್ಚು ಮಾಡುತ್ತಾರೆ. ಇದು ಸರಿಯಲ್ಲ. ಸರಿಯಾದ ಒಂದು ಸಂಸ್ಥೆಮಾಡಿ ಶೇಕಡ 50ರಷ್ಟು ಉತ್ಪತ್ತಿ ಬರುವಹಾಗೆ ಮಾಡಬೇಕೆಂದು ಮಾನ್ಯ ಸದಸ್ಯರು ಅನೇಕವೇಳೆ ಸಲಹೆ ಮಾಡಿದ್ದಾರೆ. ರೈಲ್ವೆ ಅನುಕೂಲವನ್ನು ಹೆಚ್ಚು ಮಾಡುತ್ತಿದ್ದಾರೆ. ಅನೇಕಜನ ಬಸ್ ಸರ್ವಿಸ್‌ಗಳನ್ನಿಡುವುದಾಗಿ ಹೇಳುವಾಗ ಹತೋಟಿ ಏಕೆ ಮಾಡಬೇಕು? ನರಿಯಾಗಿ ಹಣ ಕಟ್ಟಿ ಕಾನೂನುಪ್ರಕಾರ ಯಾರುಬೇಕಾದರೂ ಸರ್ವಿಸ್ ನಡೆಸಬಹುದು. ಅದರಿಂದ ಬೇಕಾದಷ್ಟು ಹಣ ಬರುತ್ತದೆ. ಆಹಾರದ ಸಬ್ಸಿಡಿ ಸಿಲ್ಲಿಸಿದರೆ ಕೋಟ್ಯಾಂತರ ರೂಪಾಯಿಗಳು ಉಳಿತಾಯವಾಗುತ್ತದೆ. ಇದಕ್ಕೆಲ್ಲಾ ರಚನಾತ್ಮಕ ರೀತಿಯಲ್ಲಿ ಕೆಲಸ ಮಾಡಬೇಕು. ಹಾಗೆ ಮಾಡುವುದಾದರೆ ಆಗ ಅಸಮಾಧಾನಕ್ಕೆ ಅವಕಾಶವೆಲ್ಲಿದೆ! ಇದನ್ನೆಲ್ಲಾ ನಾವು ಕುಳಿತು ಯೋಚನೆಮಾಡಿ ಯಾವ ವಿಧವಾದ ಒಂದು ವ್ಯವಸ್ಥೆ ಮಾಡಬೇಕು, ಯಾವರೀತಿ ಮಾಡಿದರೆ ದೇಶಾಭಿವೃದ್ಧಿಯಾಗುತ್ತದೆ ಎಂಬುದನ್ನು ಪರಿಶೀಲಿಸಿ ಆರೀತಿ ಮಾಡುವುದಾದರೆ ದೇಶದಲ್ಲಿ ಎಲ್ಲವೂ ಸರಿಹೋಗುತ್ತದೆ ಎಂಬ ಒಂದು ಅಭಿಪ್ರಾಯವನ್ನು ಸೂಚಿಸಿ ಶ್ರೀ ಸುಬ್ರಹ್ಮಣ್ಯರವರ ನಿರ್ಣಯಕ್ಕೆ ಹೃತ್ಪೂರ್ವಕವಾದ ಬೆಂಬಲ ಕೊಡುತ್ತೇನೆ.

(There were some interruptions at this stage from some members regarding extension of time for continuing the debate on His Highness's address.)

Mr. SPEAKER.—I do not think we will be able to extend it.

Janab J. MAHOMED IMAM.—I understand that several of the Ministers will have to reply.

Mr. SPEAKER.—Not all the Ministers. I think, Sri Mariappa and the Chief Minister will reply.

Janab J. MAHOMED IMAM.—I think it will take another two hours. Government may accommodate the House.

Sri K. CHENGALARAYA REDDY.—If it is necessary to continue the debate I think the Hon'ble Speaker may consider the desirability of having the discussion till lunch interval tomorrow. I have no objection.

*ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಶ್ರೀಮನ್ಮಹಾರಾಜರವರು ನಮ್ಮ ಶಾಸನ ವಿಧಾಯಕ ಸಭೆಯಲ್ಲಿ ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ ಅವರು ದೇಶದ ಅಭ್ಯುದಯಕ್ಕಾಗಿ ಮತ್ತು ಸುಖ ಶಾಂತಿ ದೇಶದಲ್ಲಿ ನೆಲಸಬೇಕೆಂದು ಸ್ಪಷ್ಟವಾಗಿ ಆಶೆ ಆಕಾಂಕ್ಷೆಗಳನ್ನು ವ್ಯಕ್ತಪಡಿಸಿರುವಾಗ ಸರ್ಕಾರದವರು, ಆಡಳಿತ ವರ್ಗದವರು ಅದಕ್ಕೆ ಚ್ಯುತಿ ತರುತ್ತಿದ್ದಾರೆಂದು ಹೇಳಬೇಕಾಗಿದೆ. ಈಗತಾನೆ ಆಹಾರದ ವಿಷಯದಲ್ಲಿ ಶ್ರೀ ಚನ್ನಬಸಪ್ಪನವರು ಬಹಳ ಚೆನ್ನಾಗಿ ಮನನೋಯುವಂತೆ, ಅರ್ಥವಾಗುವಂತೆ ವಿವರಿಸಿದ್ದಾರೆ. ಇನ್ನೂ ಒಂದು ವಿಷಯವನ್ನು ಹೇಳಬೇಕಾಗಿದೆ. ಆಹಾರದ ಹತೋಟಿ ತೆಗೆಯಬೇಕು, ಇಲ್ಲದಿದ್ದರೆ ದೇಶದಲ್ಲಿ ಬಹಳ ಅನಾಹುತವುಂಟಾಗುತ್ತದೆ ಎಂದು ಮಹಾತ್ಮ ಗಾಂಧಿಯವರು ಹೇಳುತ್ತಿದ್ದರು. ಅವರಿದ್ದಾಗ ಅವರ ಆತ್ಮಕ್ಕೆ ಶಾಂತಿಯಾಗಬೇಕು ಎಂಬ ದೃಷ್ಟಿಯಿಂದ ದೇಶದಲ್ಲಿ ಹತೋಟಿಯನ್ನು ತೆಗೆದದ್ದರಿಂದ ಯಾವ ತೊಂದರೆಯೂ ಆಗಲಿಲ್ಲ. ಮತ್ತೆ ಗಾಂಧೀಜಿಯವರು ದಿವಂಗತರಾದ ಮೇಲೆ ಸರ್ಕಾರದವರು ತಮ್ಮ ಆರ್ಡರನ್ನು ಜಾರಿಮಾಡಿ ಸುವ್ಯವಸ್ಥಿತವಾಗಿ ನಡೆಸುತ್ತಿರುವುದನ್ನು ನೋಡಿದರೆ ಜನಗಳ ಮೇಲೆ ತಮ್ಮ ದರ್ಪವನ್ನು ಬೀರುವುದಕ್ಕೆ ಹತೋಟಿಯನ್ನು ಇಷ್ಟವಾಗಿ ಭಾಸವಾಗುತ್ತದೆಯೇ ಹೊರತು ಅದರಿಂದ ದೇಶಕ್ಕೆ ಯಾವ ಪ್ರಯೋಜನವೂ ಇಲ್ಲ. ಈಗ 8½ ಕೋಟಿ ರೂಪಾಯಿಗಳಷ್ಟು ಪದಾರ್ಥಗಳನ್ನು ಪಟ್ಟಣಗಳಿಗೆ ಮಾತ್ರ ಹಂಚಿದ್ದಾರೆ. ಇದು ಬಹು ಶೋಚನೀಯ ವಿಚಾರ. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹಳ್ಳಿಯವರಿಗೆ ತೊಂದರೆಯಾದರೂ ಪಟ್ಟಣದ ಹಿತದೃಷ್ಟಿಯಿಂದ ಹತೋಟಿಯನ್ನಿಡಲಾಗಿದೆ ಎಂದು ಹೇಳಿದ್ದಾರೆ. ಆ ವಿಚಾರವನ್ನು ಬಹಳ ವಿಷಾದದಿಂದ ಸೂಚಿಸಬೇಕಾಗಿದೆ. 2/3 ಭಾಗ ಪಟ್ಟಣದ ಜನಗಳಿಗಾಗಿ ಇತರ ಹಳ್ಳಿಯ ಜನಾಂಗವನ್ನು ಸಂಕಟಕ್ಕೆ ಗುರಿಮಾಡುವುದು ಸರಿಯಲ್ಲ. ಆದ್ದರಿಂದ ತಕ್ಷಣ ಹತೋಟಿಯನ್ನು ತೆಗೆದು ಸಾರ್ವಜನಿಕರಿಗೆ ಉಪಕಾರ ಮಾಡುತ್ತೀರೆಂದು ನಂಬುತ್ತೇನೆ.

ಆಮೇಲೆ ಗ್ರಾಮಾಭ್ಯುದಯ ಎಂಬ ಒಂದು ಯೋಜನೆಯನ್ನು ಮಾಡಿದರು. ಬಹುಶಃ ಶ್ರೀ ಗುಂಡಪ್ಪ ಗೌಡರ ಕಾಲದಲ್ಲಿ ಅದು ಪ್ರಾರಂಭವಾಯಿತು. ಈಗ ಶ್ರೀ ಟಿ. ಮರಿಯಪ್ಪನವರು ಆ ಯೋಜನೆಯನ್ನು ಕೈಗೊಂಡಿದ್ದಾರೆ. ಆದರೆ ಅವರು ಅನುಸರಿಸುತ್ತಿರುವ ನೀತಿಯು ಸರಿಯಾಗಿಲ್ಲ.

ಈಗ ಮಾಡುತ್ತಿರುವುದು ಕ್ಲೋಸ್‌ಪೇಟೆಯನ್ನು ರಾಮನಗರವೆಂದೂ, ಬೌರಿಂಗ್ ಪೇಟೆಯನ್ನು ಬಂಗಾರ ಪೇಟೆಯೆಂದೂ ಹೆಸರು ಬದಲಾಯಿಸುವುದು. ಇಷ್ಟು ಮಾತ್ರ ನಡೆಯುತ್ತಿದೆಯೆಂದು ಕಾಣುತ್ತದೆ. ಇದೇ ಗ್ರಾಮಾಭಿವೃದ್ಧಿಯಾಗುತ್ತಿರುವುದು. ಗ್ರಾಮಾಭ್ಯುದಯವೆಂಬುದು ಕಾಗದದ ಮೇಲೆ ಮಾತ್ರ ಇದೆ. 1945ರಲ್ಲಿ ಈ ಯೋಜನೆ ಪ್ರಾರಂಭವಾದಾಗ ರಸ್ತೆ ಮಾಡುವುದು, ಸೇತುವೆ ನಿರ್ಮಿಸುವುದು, ಗಿಡಗಳನ್ನು ನೆಡುವುದು ಮುಂತಾದ ಕೆಲಸಗಳು ನಡೆಯುತ್ತಿದ್ದುವು. ಅಲ್ಲಿಂದೀಚೆಗೆ ಆ ತರಹ ಉಪಯುಕ್ತವಾದ ಕೆಲಸಗಳೇನೂ ಆಗಿಲ್ಲ. ಹೊಸದಾಗಿ ತಂದಿರುವ ಅಭಿವೃದ್ಧಿ ಯೋಜನೆಯ ಪ್ರಕಾರ ಯಾವ ಒಂದು ಮೈಲಿಯಲ್ಲೂ ರಸ್ತೆಯಾಗಿಲ್ಲ, ಸೇತುವೆ ಮಾಡಿಲ್ಲ, ಗಿಡ ನೆಟ್ಟಿಲ್ಲ, ಬರೀ ನರಸ್ಪತಿ ಪ್ರಸನ್ನವಾಗಿದೆ. ಚುನಾವಣೆ ಕಾಲ ಬಂದಾಗ ಡೆವಲಪ್‌ಮೆಂಟ್ ಕಮಿಟಿಯ ಮೆಂಬರುಗಳನ್ನು ಮತ್ತು ಥೆರ್ಮಾನ್ನರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆಂಬ ಒಂದು ದೃಷ್ಟಿಯಿದೆಯೇ ವಿನಾ ಸಾರ್ವಜನಿಕರಿಗೆ ಯಾವ ಉಪಯೋಗವೂ ಆಗುತ್ತಿಲ್ಲ. ಇದು ನನ್ನ ಅನುಭವ. ಶಾನನ ವಿಧಾಯಕ ಸಭೆಗೆ ಉಪಡುನಾವಣೆ ಬಂದಾಗ ಈ ವಿಚಾರ ಗೊತ್ತಾಯಿತು, ಚುನಾವಣೆಯಾಗುವಾಗ ನಮ್ಮ ಜಿಲ್ಲೆಯಲ್ಲಿರುವವರೇ ಅದಕ್ಕೆ ಸಹಾಯ ಮಾಡುತ್ತಾರೆ.

ಅಧ್ಯಕ್ಷರು.—ಆದರೂ ನೀವು ಚುನಾಯಿತರಾಗಿ ಬಂದಿದ್ದೀರಲ್ಲಾ (laughter !)

ಶ್ರೀ ಬಿ. ಚನ್ನಬೈರೇಗೌಡರು.—ಅದು ಜನರ ವಿಶ್ವಾಸದಿಂದ ನಡೆದ ಕೆಲಸ. ಚುನಾವಣೆಗೆ ಸಹಕಾರಿಯೆಂದು ಡೆವಲಪ್‌ಮೆಂಟ್ ಯೋಜನೆಗಳು ಬಂದಿವೆಯೇ ಹೊರತು ನಿಜವಾಗಿಯೂ ಏನೂ ಪ್ರಯೋಜನಕಾರಿಯಾಗಿಲ್ಲ. ನಾನು ನೋಡಿರುವ ಹಾಗೆ ರೂಪಾಯಿಗೆ 12 ಆಣೆ ಕೆಲಸ ಕೂಡ ಆಗಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಡೆವಲಪ್‌ಮೆಂಟ್ ಕಮಿಟಿಗಳನ್ನು ಬರಿಯ ಚುನಾವಣೆಗಾಗಿಯೇ ಏರ್ಪಾಡು ಮಾಡಿದಂತೆ ಕಾಣುತ್ತದೆ. ಇದು ನಮ್ಮ ಡಿಸ್ಟ್ರಿಕ್ಟ್‌ನಲ್ಲೇ ಅಲ್ಲ. ಎರ್ನಾ ಡಿಸ್ಟ್ರಿಕ್ಟುಗಳಲ್ಲಿಯೂ ಹೀಗೆಯೇ ಆಗಿದೆ.

ಮೊನ್ನೆ ನಾನು ಕೆಲವು ಕಡೆ ಹಳ್ಳಿಗಳ ಪ್ರಾಂತ ಪ್ರವಾಸ ಹೋಗಿದ್ದೆ. ವಿಶ್ವೇಶ್ವರಯ್ಯನವರ ಯೋಜನೆ ಎಂದು ಹೇಳಿ ಅಲ್ಲಿಯ ಜನರಿಗೆ ಏನೇನೋ ಸುಳ್ಳು ಹೇಳಿ ಅವರಿಂದ ಈ ಯೋಜನೆಗಾಗಿ ಹಣವನ್ನು ವಸೂಲು ಮಾಡಿದ್ದಾರೆ.

ಶ್ರೀ ಎಂ. ಎನ್. ಜೋಯಿಸರು.—ಸುಳ್ಳು ಎಂಬ ಪದ unparliamentary, ಅದನ್ನು ಸದಸ್ಯರು ಉಪಯೋಗಿಸುವುದನ್ನು ತಪ್ಪಿಸಬೇಕು.

ಶ್ರೀ ಬಿ. ಚನ್ನಬೈರೇಗೌಡರು.—ಹೋಗಲಿ, ನಿಜವಲ್ಲದ ವಿಚಾರಗಳನ್ನು ಹೇಳಿ ಹಣ ವಸೂಲು ಮಾಡಿದ್ದರು.

ಇನ್ನು ಮಲ್ಟಪರ್‌ಪಸ್ ಸೊಸೈಟಿಗಳೂ ಸಹ ಹೀಗೆಯೇ ಸರಿಯಾಗಿ ಕೆಲಸಮಾಡುತ್ತಿಲ್ಲ. ದೇಶದಲ್ಲೆಲ್ಲಾ ಒಟ್ಟು 15-20 ಕಡೆ ಈ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿರಬಹುದೋ ಏನೋ. ನಮ್ಮ ತಾಲ್ಲೂಕಿನಲ್ಲಿ 12 ಸಂಘಗಳಿವೆ. ಎಲ್ಲವೂ ಈಗ ಮಲಗಿವೆ. ಪ್ರಾರಂಭವಾದ ಆರು ತಿಂಗಳು ಸರಿಯಾಗಿ ಕೆಲಸ ಮಾಡಿದವು... .....

ಶ್ರೀ ಟಿ. ಮರಿಯಪ್ಪನವರು.—ಈ ಸಂಘಗಳು ಪ್ರಾರಂಭವಾಗಿಯೇ ಸ್ವಲ್ಪ ಕಾಲವಾಯಿತು. ಆರು ತಿಂಗಳು ಸರಿಯಾಗಿ ಕೆಲಸ ಮಾಡಿವೆಯೆಂದು ಹೇಳುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡರು.—ವಿಶ್ವೇಶ್ವರಯ್ಯನವರ ಯೋಜನೆಯೆಂದು ಮೂರು ಸಾವಿರ ರೂಪಾಯಿ ಬಂಡವಾಳ ಹಾಕಿ ಮಾಡಬೇಕೆಂದು ಸರ್ಕಾರದವರು ಹೇಳುತ್ತಾರೆ. ಇಷ್ಟು ಸ್ವಲ್ಪ ಬಂಡವಾಳದಲ್ಲಿ ಇದು ಹೇಗೆ ಸಾಧ್ಯವಾಗುತ್ತದೆಯೋ ನಾನು ಬೇರೆ ಕಾಣೆ. ವಿಶ್ವೇಶ್ವರಯ್ಯನವರು 1910 ಅಥವಾ 1920ನೆಯ ಇಸವಿಯಲ್ಲಿ ಮಾಡಿದ ಯೋಜನೆಯನ್ನು ಈಗ ತೆಗೆದುಕೊಂಡು ಅದೇ ಮೂರು ಸಾವಿರ ರೂಪಾಯಿನಲ್ಲಿ ಮಾಡಬೇಕೆಂದರೆ ಸಾಧ್ಯವೆ! ಇಷ್ಟು ಹಣ ಈಗಿನ ಕಾಲದಲ್ಲಿ ಕುಳಿತುಕೊಳ್ಳುವುದಕ್ಕೆ ಬೇಕಾದ ಮೇಜು ಕುರ್ಚಿಗಳನ್ನು ಕೊಂಡು ಕೊಳ್ಳುವುದಕ್ಕೇ ಸಾಕಾಗುವುದಿಲ್ಲ. ಇದಲ್ಲದೆ ತಿಂಗಳಿಗೆ ಸೂಪರ್‌ವೈಜರಿಗೆ 50 ರೂಪಾಯಿ ಸಂಬಳ, ಇದಲ್ಲದೆ ಸೆಕ್ರೆಟರಿ ಬೇರೆ ಇರುತ್ತಾರೆ. ಹೀಗಾದರೆ ಏನು ಕೆಲಸ ಮಾಡುವುದು? ಒಟ್ಟಿನಲ್ಲಿ ಹೇಳುವುದಾದರೆ ಇದರಲ್ಲಿ ಸ್ವಾರ್ಥಸಾಧನೆಯ ಉದ್ದೇಶವಿದೆಯೇ ಹೊರತು ಬೇರೆ ಏನೂ ಇಲ್ಲ. ನಿಜವಾಗಿಯೂ ಈ ಮೂರು ಸಾವಿರ ರೂಪಾಯಿನ ಯೋಜನೆಯಿಂದ ರೈತರಿಗೆ ಎಷ್ಟು ಮಟ್ಟಿನ ಪ್ರಯೋಜನವಾಗುತ್ತದೆಂಬುದನ್ನು ನಾವು ಸುಲಭವಾಗಿ ಊಹಿಸಬಹುದು.

ಇನ್ನು ಹೆಚ್ಚು ಆಹಾರ ಬೆಳೆಯುವ ಯೋಜನೆಯ ವಿಚಾರ ನೋಡಿದರೆ, ಇದಕ್ಕೆ ಅರ್ಥವೇ ಇಲ್ಲ. ರೈತರ ವ್ಯವಸಾಯಕ್ಕೆ ಹೆಚ್ಚು ಹೆಚ್ಚಾಗಿ ಬುಲ್‌ಡೋಜರುಗಳನ್ನು ಕೊಡುತ್ತೇವೆ, ಟ್ರಾಕ್ಟರುಗಳನ್ನು ಕೊಡುತ್ತೇವೆ ಎಂದು ಸರ್ಕಾರದವರು ಹೇಳುತ್ತಾರೆ. ರೈತರು ಟ್ರಾಕ್ಟರು ಬೇಕೆಂದು ಅಮಲ್ದಾರರಿಗೆ ಬರೆದುಕೊಂಡರೆ ಅದು ಡೆಪ್ಯುಟಿ ಕಮಿಷನರಿಗೆ ಹೋಗಿ, ಅದನ್ನವರು ಡಿಸ್ಟ್ರಿಕ್ಟ್ ಕಮಿಟಿಯವರಿಗೆ ಕಳುಹಿಸಿ ಅವರ ಅಭಿಪ್ರಾಯ ಪಡೆದು ಕಳುಹಿಸುವ ಹೊತ್ತಿಗೆ ಎಷ್ಟೋ ಕಾಲವಾಗಿ ಹೋಗಿರುತ್ತದೆ. ಆಮೇಲೆ ಕಳುಹಿಸಿದರೆ ಅದರಿಂದ ಪ್ರಯೋಜನವೇ ಆಗುವುದಿಲ್ಲ. ಇದು ನನ್ನ ಅನುಭವಕ್ಕೇ ಬಂದಿದೆ. ಇದು ಸಕಾಲಕ್ಕೆ ಸಿಕ್ಕಲಿಲ್ಲವಾದ್ದರಿಂದ ಇದಕ್ಕೆ ತಕ್ಕ ಏರ್ಪಾಡು ಮಾಡಲು ಸಾಧ್ಯವಾಗಲಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇದು, ಇದು ಎಂದರೆ ಏನು ಸ್ವಾಮಿ! (ನಗು !)

ಶ್ರೀ ಬಿ. ಚನ್ನಬೈರೇಗೌಡರು.—ಆಹಾರ ಪದಾರ್ಥಗಳ ಮೇಲೆ ಹಾಕಿರುವ ಹತೋಟಿಗಳನ್ನು ತೆಗೆದುಹಾಕಬೇಕು. ಹೀಗೆ ಮಾಡಿದರೆ ಜನರಲ್ಲಿ ಹೆಚ್ಚು ಉತ್ಪತ್ತಿ ಮಾಡಲು ಒಂದು ಪ್ರೋತ್ಸಾಹ ಮನೋಭಾವ ಬರಲು ಅವಕಾಶವಾಗುತ್ತದೆ. ಹೀಗೆ ಮಾಡದೆ ಟ್ರಾಕ್ಟರುಗಳನ್ನು ಕೊಟ್ಟು ಹೆಚ್ಚು ಆಹಾರ ಬೆಳೆಸುತ್ತೇವೆಂದು ಹೇಳುವುದು ಬರಿಯ ಮಾತಾಗುತ್ತದೆ.

ಕೃಷ್ಣರಾಜ ಸಾಗರದ ವಿಷಯದಲ್ಲಿ ಒಂದೇ ಒಂದು ಮಾತು ಹೇಳಿ ಮುಗಿಸುತ್ತೇನೆ. ನಮ್ಮ ಸ್ನೇಹಿತರು ಹಾಸ್ಯವಾಗಿ, ಕೃಷ್ಣರಾಜಸಾಗರದ ನೀರನ್ನೆಲ್ಲಾ ಅಗಸ್ತ್ಯರು ಕುಡಿದುಬಿಟ್ಟರೆಂದು ಹೇಳಿದರು. ಅದಿರಲಿ. ಕೋರಾರ ಜಿಲ್ಲೆಯಲ್ಲಿ ಒಂದು ಸಾಧಾರಣವಾದ ಕೆರೆ ಇದೆ. ಅದರಿಂದ ಸಾವಿರ ಎಕರೆ ಜಮೀನು ಸಾಗುವಳಿ ಆಯಿತು. ಇದಕ್ಕೆ ಕಾರಣ ಒಬ್ಬರು ಸಬ್ ಓವರ್ಸಿಯವರು. ಅವರು ಬಹಳ ಎಚ್ಚರಿಕೆಯಿಂದ ಸ್ವಲ್ಪವಾಗಿ ನೀರನ್ನು ಕೊಡುತ್ತಾ ಇಷ್ಟು ಜಮೀನನ್ನೂ ಸಾಗುವಳಿ ಮಾಡಲು ಅವಕಾಶ ಮಾಡಿದರು. ಹೀಗಿರುವಾಗ ಕೃಷ್ಣರಾಜ ಸಾಗರಕ್ಕೆ ಒಂದು ಸಮಿತಿ ಇದ್ದರೂ ಹೀಗೇ ಕಾಯಿತು! ಈಗ ಅಲ್ಲಿ ನಷ್ಟಪಟ್ಟವರಿಗೆ ಪರಿಹಾರ

ಕೊಡಬೇಕೆಂದು ಹೇಳುತ್ತಾರೆ. ದೇಶದ ಹಣದಿಂದ ಈ ಪರಿಹಾರವನ್ನು ಕೊಡಬಾರದು; ಈ ನಷ್ಟಕ್ಕೆ ಯಾರು ಜವಾಬ್ದಾರರೋ ಅವರಿಂದ ವಸೂಲು ಮಾಡಿ ಪರಿಹಾರ ಕೊಡಬೇಕೆಂದು ಸೂಚಿಸುತ್ತೇನೆ.

ಚುನಾವಣೆಗಳ ವಿಷಯ ಹೇಳುವುದಾದರೆ, ಪ್ರಜಾ ಸತ್ತೆಯಲ್ಲಿ ಚುನಾವಣೆಗಳಲ್ಲಿ ಅಧಿಕಾರಿಗಳ ಕೈವಾಡ ದಿಂದ ಮತದಾರರ ಅಭಿಪ್ರಾಯವನ್ನು ವ್ಯತ್ಯಾಸಮಾಡು ವುದಕ್ಕೆ ಪ್ರಯತ್ನಮಾಡಬಾರದು. ಮೊನ್ನೆ ತಾನೆ ನಡೆದ ಚುನಾವಣೆಯಲ್ಲಿ ಅಧಿಕಾರಿಗಳ ಪ್ರಭಾವದಿಂದ ಒಬ್ಬ ವರ್ತಕರ ಕಾರನ್ನು ಉಪಯೋಗಿಸಿಕೊಂಡು ಮೂರು ದಿನಗಳು ಚುನಾವಣೆ ಪ್ರಚಾರ ಮಾಡಿದರು. ಒಟ್ಟಿನಲ್ಲಿ ಅಧಿಕಾರಿಗಳ ಪ್ರಭಾವದಿಂದ ಮತದಾರರ ಅಭಿಪ್ರಾಯವನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಬಾರ ದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri G. A. ACHARYA (Bangalore District—General).—Sir, His Highness's speech is before us. He has analysed and correctly depicted the actual financial position of Mysore and has also given note of optimism. As you know, Sir, Mysore has to progress only with further industrialisation. He has said that increased production is necessary and the incomplete capital works must be completed at any cost. The last sentence is 'All these need finance and the question is engaging the attention of my Government'. We are faced with economic crisis and most of us know what exactly the country is facing. There has been so much of investment paralysis in the country that some of my colleagues when they speak, seem to think that Ministers are astrologers or magicians.

Janab J. MAHOMED IMAM.—At least Administrators!

Sri G. A. ACHARYA.—Janab Mahomed Imam was telling us that he is suffering from the disease of pessimism. So I would like to cure him Sir, with a dose of optimism. He was a Minister during the war period. Whenever he talks, as a matter of fact, he accused the present administrators as propagandistic. But I say he was speaking to-day with an eye on tomorrow's newspapers 'how Imamanna's speech may come there'. That is exactly what I would say after listening to his speeches.

(Interruption from Janab Mahomed Imam).

There were hardly any constructive criticisms. Mostly they were destructive criticisms.

Janab J. MAHOMED IMAM.—To say that I am speaking with an eye to newspaper publicity is a reflection on me, Sir.

Sri G. A. ACHARYA.—That is my opinion. I have absolute freedom to say what I feel.

Janab J. MOHAMED IMAM.—That is a reflection against me. I can also retort. Whether it is in good taste is a matter to be decided by the Chair.

Mr. SPEAKER.—It is better if the Hon'ble Member does not impute motives.

Sri G. A. ACHARYA.—I said the speaker is like that.

ಅಧ್ಯಕ್ಷರು.—The Honourable Member may continue his speech tomorrow.

Fixing time for receipt of notice of amendment to Special Motion re. Delimitation of Constituencies.

ಅಧ್ಯಕ್ಷರು (ಶ್ರೀ ವಿ. ವೆಂಕಟಪ್ಪನವರು).—ನಾಳೆಯ ಕಾರ್ಯ ಕ್ರಮದ ಪ್ರಟ್ಟಿಯಲ್ಲಿರುವ ವಿಶೇಷ ಸೂಚನೆಗೆ ಯಾರಾದರೂ ತಿದ್ದುಪಡಿ ಕಳುಹಿಸುವಹಾಗಿದ್ದರೆ ಅವರು ನಾಳೆ ಹನ್ನೊಂದು ಘಂಟೆಯೊಳಗೆ ಕಳುಹಿಸಬಹುದು.

The House will now adjourn.

(The Assembly adjourned at Six of the Clock to meet again at One of the Clock on Thursday, the 30th August 1950.)

WD 2201—GPB—550—18-9-50.